06 ಅಕ್ಟೋಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 206 ಪುಟ-4 ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ
# ಪ್ರಜೋದಯ
ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ


ಕಾಂತಾರ -1 ಸಿನಿಮಾದಲ್ಲಿ ಕನಕವತಿ ಪಾತ್ರದ ಮೂಲಕ ಪ್ರೇಕ್ಷಕರ ಗಮನ ಸೆಳೆಯುತ್ತಿರುವ ನಟಿ ರುಕ್ಮಿಣಿ ವಸಂತ್


ಹೆದ್ದಾರಿಯ ಅಡ್ಡ ಹಾದಿಗುಂಟ » 2


ನೇಪಾಳದಲ್ಲಿ ಪ್ರವಾಹ, ಭೂ ಕುಸಿತ : 51 ಮಂದಿ ಸಾವು



ಎಸ್‌ಐಆರ್ ಬಳಿಕ ಮತದಾರರ ಪಟ್ಟಿ ಶುದ್ಧೀಕರಣ ತೃಪ್ತಿ ತಂದಿದೆ » 4

# ಸಮೀಕ್ಷೆ ವಿಧಾನಕ್ಕೆ ಪ ತಿಪಕ್ಷಗಳ ವಾಗ್ದಾಳಿ

## ಗಣತಿದಾರರಿಗೆ ಕೇಂದ್ರ ಸಚಿವ ಸೋಮಣ್ಣ ತರಾಟೆ | ಸಮುದಾಯಗಳಲ್ಲಿ ಗೊಂದಲ ಸೃಷ್ಟಿ ಎಂದು ವಿಜಯೇಂದ್ರ ಆರೋಪ

• ಪ್ರಜೋದಯ ವರದಿ

**ಬೆಂಗಳೂರು:** ಜಾತಿ ಗಣತಿ ಕುರಿತು ಕಾಂಗ್ರೆಸ್ ಸರ್ಕಾರದ ವಿರುದ್ಧ ಭಾನುವಾರ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ತೀವ್ರ ವಾಗ್ದಾಳಿ ನಡೆಸಿದ್ದು, ಗಣತಿಯನ್ನು ನಡೆಸುವ ವಿಧಾನ ಮತ್ತು ಪ್ರಶ್ನೆಗಳನ್ನು ಕೇಳುವ ವಿಧಾನಕ್ಕೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿವೆ.

ಸಮೀಕ್ಷೆ ವೇಳೆ ಗಣತಿದಾರರು ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಎರಡೂ ಪಕ್ಷಗಳು ತರಾಟೆಗೆ ತೆಗೆದುಕೊಂಡಿವೆ.ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ವಿ.ಸೋಮಣ್ಣ ಅವರು, ಮೇಲ್ಜಾತಿಗಳನ್ನು ತುಳಿಯುವ ಸಲುವಾಗಿ ಜಾತಿವಾರು ಸಮೀಕ್ಷೆ ಮಾಡಲಾಗುತ್ತಿದೆ. ಸಿದ್ದರಾಮಯ್ಯ ಸರ್ಕಾರ ತಕ್ಷಣವೇ ಈ ಸಮೀಕ್ಷೆಯನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು.

ಸಮೀಕ್ಷಕರು ನಮ್ಮ ಮನೆಗೂ ಬಂದಿದ್ದರು. ನನ್ನೊಬ್ಬನಿಂದ ಮಾಹಿತಿ ಪಡೆಯಲು 1 ಗಂಟೆ 4 ನಿಮಿಷ ಬೇಕಾಯಿತು. ತಾಂತ್ರಿಕ ಸಮಸ್ಯೆ ಒಂದೆಡೆಯಾದರೆ, ಅನಗತ್ಯವಾದ ಪ್ರಶ್ನೆಗಳು ಒಂದೆಡೆ. ಅಗತ್ಯವಿಲ್ಲದೆ ಪ್ರಶ್ನೆಗಳನ್ನು ಏಕೆ



ಕೇಳುತ್ತಿದ್ದೀರಿ ಎಂದು ಪ್ರಶ್ನಿಸಿದರು.

ಮೇಲ್ಜಾತಿ ಅಥವಾ ಯಾವುದೋ ಜಾತಿಗಳನ್ನು ತುಳಿಯುವ ಸಲುವಾಗಿ ಇಷ್ಟೆಲ್ಲಾ ಅಸಹ್ಯಕರವಾದ ಸಮೀಕ್ಷೆಯನ್ನು ನಡೆಸುತ್ತಿದ್ದಾರೆ. ಸಮೀಕ್ಷೆ ಬಗ್ಗೆ ಅಧಿಕಾರಿಗಳಿಗೇ ಪೂರ್ಣ ಮಾಹಿತಿ ಇಲ್ಲ. ಇದು ಇನ್ನೊಂದು ಕಾಂತರಾಜ ಆಯೋಗದ ಸಮೀಕ್ಷೆಯಂತಾಗುತ್ತದೆ. ಈ ಎಲ್ಲಾ ಗೊಂದಲಗಳಿಗೆ ತೆರೆ ಎಳೆಯಬೇಕು. ಅತ್ಯಂತ ಅವೈಜ್ಞಾನಿಕವಾಗಿ ಈ ಸಮೀಕ್ಷೆ ನಡೆಸಲಾಗುತ್ತಿದೆ. ಆರು ತಿಂಗಳು ವರ್ಷವಾದರೂ ಸಮೀಕ್ಷೆ ಮುಗಿಯುವುದಿಲ್ಲವೆಂದರು.

### ಸರ್ಕಾರದ ಏಜೆಂಟ್ ಆಗಬೇಡಿ

ರಾಜ್ಯ ಸರ್ಕಾರ ಕೈಗೊಂಡಿರುವ ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಸಮೀಕ್ಷೆ ಹಿನ್ನೆಲೆ ಮನೆಗೆ ಗಣತಿಗೆ ಬಂದವರಿಗೆ ಕೇಂದ್ರ ಸಚಿವ ವಿ.ಸೋಮಣ್ಣ ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆಯಿತು. ಬೆಂಗಳೂರಿನ ವಿಜಯನಗರದಲ್ಲಿರುವ ಕೇಂದ್ರ ಸಚಿವ ಸೋಮಣ್ಣ ಮನೆಗೆ ಬೆಳಿಗ್ಗೆ 9 ಜನ ಸಿಬ್ಬಂದಿ ತೆರಳಿದ್ದರು. ಮನೆಗೆ ಬಂದವರನ್ನು ನೋಡಿ ಇಷ್ಟು ಜನ ಯಾಕೆ ಬಂದಿದ್ದೀರಾ ಎಂದು ಕೇಳಿದ ಕೇಂದ್ರ ಸಚಿವರು, ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರವೇ ಜಾತಿಗಣತಿ ಮಾಡಿಸುತ್ತದೆ. ಹೀಗಿರುವಾಗ ಇಷ್ಟು ಪ್ರಶ್ನೆಗಳು ಬೇಕಾ, ಇದೆಲ್ಲಾ ನೀವು ಸರ್ಕಾರಕ್ಕೆ ತಿಳಿಸಬೇಕಿರುವಾಗ ಸರ್ಕಾರಿ ನೌಕರರು ಸರ್ಕಾರದ ಏಜೆಂಟ್ ಆಗಿ ಕೆಲಸ ಮಾಡಬಾರದು ಎಂದು ಹೇಳಿದರು.

ಉಪಜಾತಿ ಯಾವುದು ಎಂದು ಗಣತಿದಾರರು ಕೇಳಿದಾಗ ಅದೆಲ್ಲಾ ಯಾಕೆ ಬೇಕು, ಸಿದ್ದರಾಮಯ್ಯ ಜಾತಿ ಅಂತಾ ಬರೆದುಕೊಳ್ಳಿ.

> **ವೈಯಕ್ತಿಕ ಎನಿಸುವ ಕೆಲವು ಪ್ರಶ್ನೆಗಳನ್ನು ಕೇಳದಂತೆ ಜಾತಿ ಸಮೀಕ್ಷೆ ನಡೆಸುತ್ತಿರುವ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಯಾರೇ ಯಾವುದೇ ಆಕ್ಷೇಪಣೆ ಎತ್ತಲಿ, ಸಮೀಕ್ಷೆ ಮಾಡಬೇಕು. ಸಮೀಕ್ಷೆಯು ಸ್ವಯಂ ಪ್ರೇರಿತವಾಗಿದೆ ಜನರು ತಮಗೆ ಬೇಕಾದುದ್ದನ್ನು ಉತ್ತರಿಸಬಹುದು. ವಿರೋಧಿಸುವುದರಲ್ಲಿ ಯಾವುದೇ ಅರ್ಥವಿಲ್ಲ.**
> **- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ**

### ಸಾಮಾನ್ಯ ಜನರ ಗತಿ ಏನು : ಜೆಡಿಎಸ್ ಪ್ರಶ್ನೆ

ಯಾವ ಪ್ರಶ್ನೆಗಳನ್ನು ಕೇಳಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಅವರಿಗೇ ತಿಳಿದಿಲ್ಲ, ಗಣತಿದಾರರು ಕೇಳುವ ಪ್ರಶ್ನೆಗಳಿಂದ ಡಿ.ಕೆ.ಶಿವಕುಮಾರ್ ಅವರು ನಿರಾಶೆಗೊಂಡಿದ್ದಾರೆ. ಹಾಗಾದರೆ ಸಾಮಾನ್ಯ ಜನರ ಗತಿ ಏನೆಂದು ಜೆಡಿಎಸ್ ಪ್ರಶ್ನಿಸಿದೆ.

ನಗರ ಪ್ರದೇಶದ ಜನರಿಗೆ ಅನಗತ್ಯ ಮತ್ತು ಅಪ್ರಸ್ತುತ ಪ್ರಶ್ನೆಗಳಿಗೆ ಉತ್ತರಿಸಲು ತಾಳ್ಮೆ ಮತ್ತು ಸಮಯವಿದೆಯೇ, ಇದರ ಹಿಂದಿನ ಪಿತೂರಿ ಏನು ಮತ್ತು ಕೇಂದ್ರ ಸರ್ಕಾರವು ಮುಂದಿನ ವರ್ಷ ಜನಗಣತಿಯೊಂದಿಗೆ ಜಾತಿ ಎಣಿಕೆಯನ್ನು ನಡೆಸುವುದಾಗಿ ಘೋಷಿಸಿದ್ದರೂ, ಹಠಮಾರಿ ಸಿದ್ದರಾಮಯ್ಯ ಸರ್ಕಾರವು ರಾಜ್ಯದಲ್ಲಿ ತರಾತುರಿಯಲ್ಲಿ ನಡೆಸುತ್ತಿರುವ ಈ ಸಮೀಕ್ಷೆಯಿಂದ ಯಾರಿಗೆ ಲಾಭ ಎಂದು ಕೇಳಿದೆ.

ಇದು ವೋಟ್‌ಗಾಗಿ ಸಿದ್ದರಾಮಯ್ಯ ಮಾಡಿಸುತ್ತಿರುವ ಸಮೀಕ್ಷೆ ಎಂದಿರುವ ಕೇಂದ್ರ ಸಚಿವರು, ಅನೇಕ ಪ್ರಶ್ನೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಸರನ್ನೇ ಹಾಕೊಳ್ಳಿ ಎಂದಿದ್ದಾರೆ.

### ದಿನೇ ದಿನೇ ಗೊಂದಲ ಸೃಷ್ಟಿ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಮಾತನಾಡಿ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಹೆಸರಿನಲ್ಲಿ ಸರ್ಕಾರ ನಡೆಸುತ್ತಿರುವ ಜಾತಿ ಗಣತಿ ದಿನೇ ದಿನೇ ಗೊಂದಲ ಸೃಷ್ಟಿಸುತ್ತಿದೆ. ಇದು ಎಲ್ಲಾ ಸಮುದಾಯಗಳಲ್ಲಿ ಗೊಂದಲ ಸೃಷ್ಟಿಸಿದೆ. ಪ್ರಾಥಮಿಕವಾಗಿ ಸರ್ಕಾರ ಸರಿಯಾದ ಸಿದ್ಧತೆ ಇಲ್ಲದೆ ಆತುರದಲ್ಲಿ ಸಮೀಕ್ಷೆ ಕೈಗೊಂಡಿದೆ ಎಂದು ತೋರುತ್ತದೆ ಎಂದರು.

ಗಣತಿ ಕಾರ್ಯಕ್ಕೆ ವಿಕಲಚೇತನರನ್ನು ಸೇರಿಸಿಕೊಳ್ಳುವ ಬಗ್ಗೆ ಟೀಕೆಗಳಿವೆ. ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿಗಳು ಏಕೆ ಇಷ್ಟೊಂದು ಆತುರದಲ್ಲಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಕಾಂಗ್ರೆಸ್ ಪಕ್ಷದೊಳಗೆ ಅಕ್ಟೋಬರ್ ಅಥವಾ ನವೆಂಬರ್ ಕ್ರಾಂತಿಯ ಬಗ್ಗೆ ಮಾತುಕತೆ ನಡೆಯುತ್ತಿರುವಾಗ, ರಾಜ್ಯದಲ್ಲಿ ಈ ಸಂಭವನೀಯ ರಾಜಕೀಯ ಕ್ರಾಂತಿ ಮತ್ತು ಜಾತಿ ಗಣತಿಗೆ ಯಾವುದೇ ಸಂಬಂಧವಿದೆಯೇ ಎಂಬ ಚರ್ಚೆಗಳು ನಡೆಯುತ್ತಿವೆ ಎಂದರು.

# ಗೋಪಾಲಸ್ವಾಮಿ ಜಿಲ್ಲಾ ರಾಜಕಾರಣದ ಘನತೆ ಮರುಸ್ಥಾಪಿಸಲಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕಾರ್ಮಿಕ ಮುಖಂಡರಾಗಿ ರಾಜಕಾರಣಕ್ಕೆ ಬಂದು ಎಲ್ಲರ ಹೃದಯಗಳನ್ನೂ ಗೆಲ್ಲುವ ಶಕ್ತಿ ಇರುವ ಗೋಪಾಲಸ್ವಾಮಿ ಅವರು ಜಿಲ್ಲಾ ರಾಜಕಾರಣದ ಘನತೆಯನ್ನು ಮರುಸ್ಥಾಪಿಸುವ ಕೆಲಸವನ್ನೂ ಮಾಡಲಿ ಎಂದು ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರು ಹೇಳಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರ 55ನೇ ಹುಟ್ಟು ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಒಬ್ಬ ಕ್ರೀಡಾಪಟುವಿಗೆ ಇರಬೇಕಾದ ಕ್ರೀಡಾ ಮನೋಭಾವ ಮತ್ತು ಬದ್ಧತೆ ಎರಡೂ ಗೋಪಾಲಸ್ವಾಮಿ ಅವರಿಗಿದೆ. ಪ್ರತಿಯೊಬ್ಬರನ್ನೂ ಅತ್ಯಂತ ಆತ್ಮೀಯವಾಗಿ ನಡೆಸಿಕೊಳ್ಳುವ ಸಜ್ಜನಿಕೆಯೇ ಗೋಪಾಲಸ್ವಾಮಿ ಅವರ ವ್ಯಕ್ತಿತ್ವದ ಶಕ್ತಿ ಎಂದರು.

ತಾವು ಪ್ರತಿನಿಧಿಸುವ ಕ್ಷೇತ್ರದ ಜನರ ಮತ್ತು ಸಮಾಜದ ಘನತೆಯನ್ನು ಹೆಚ್ಚಿಸುವುದು ಉತ್ತಮ ರಾಜಕಾರಣಿಯ ಲಕ್ಷಣ. ಈ ಲಕ್ಷಣಗಳು



ಗೋಪಾಲಸ್ವಾಮಿ ಅವರಲ್ಲಿವೆ. ಹೀಗಾಗಿ ಜಿಲ್ಲಾ ರಾಜಕಾರಣದ ಘನತೆಯನ್ನು ಮರು ಸ್ಥಾಪಿಸುವುದು ಹಾಗು ಹಾಸನ ಜಿಲ್ಲೆಯ ರಾಜಕಾರಣದ ಇತಿಹಾಸ ಮತ್ತು ವರ್ತಮಾನಕ್ಕೆ ಅಂಟಿರುವ ಕಳಂಕವನ್ನು ಅಳಿಸಿ ಹಾಸನದ ಜನತೆಯ ಸ್ವಾಭಿಮಾನವನ್ನು ಎತ್ತಿ ಹಿಡಿಯುವ ಶಕ್ತಿ ಗೋಪಾಲಸ್ವಾಮಿ ಅವರುಗಿದೆ. ಈ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ ಎನ್ನುವ ಭರವಸೆ ನನಗಿದೆ ಎಂದರು.

ನಾನೇ ಎಂದು ಎದೆ ಎತ್ತಿ ನಿಂತ ಹೆಮ್ಮರಗಳೆಲ್ಲಾ ಜೋರು ಮಳೆಗೆ ನೆಲಕ್ಕೆ ಬೀಳುತ್ತವೆ. ಆದರೆ, ಗರಿಕೆ ಹುಲ್ಲನ್ನು ಯಾವ ಮಳೆ, ಬಿರುಗಾಳಿಯೂ ಉರುಳಿಸಲು ಸಾಧ್ಯವಿಲ್ಲ.

» ನಾಲ್ಕನೇ ಪುಟದಲ್ಲಿ

# ಗಣತಿಗೆ ತೆರಳಿದ್ದ ಶಿಕ್ಷಕಿ ಮೇಲೆ ಬೀದಿ ನಾಯಿ ದಾಳಿ

## ರಕ್ಷಣೆಗೆ ಬಂದವರಿಗೂ ಕಚ್ಚಿದ ನಾಯಿಗಳು : ನಾಲ್ವರಿಗೆ ಗಂಭೀರ ಗಾಯ

• ಪ್ರಜೋದಯ ವರದಿ

**ಹಾಸನ:** ಜಾತಿಗಣತಿಗೆ ತೆರಳಿದ್ದ ಶಿಕ್ಷಕಿ ಮೇಲೆ 10ಕ್ಕೂ ಬೀದಿನಾಯಿಗಳು ದಾಳಿ ನಡೆಸಿ ಮುಖ, ಕೈ-ಕಾಲು ಸೇರಿ ದೇಹದ ಹಲವು ಭಾಗಗಳಿಗೆ ಕಚ್ಚಿ ಗಂಭೀರವಾಗಿ ಗಾಯಗೊಳಿಸಿವೆ. ಶಿಕ್ಷಕಿ ರಕ್ಷಣೆಗೆ ಬಂದ ಆಕೆಯ ಪತಿ ಸೇರಿ ಏಳು ಜನರನ್ನು ಬೀದಿ ನಾಯಿಗಳು ಕಚ್ಚಿ ಗಾಯಗೊಳಿಸಿರುವ ಘಟನೆ ಭಾನುವಾರ ಬೇಲೂರು ಪಟ್ಟಣದ ನೆಹರು ನಗರದಲ್ಲಿ ನಡೆದಿದೆ.

ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕಿ ಚಿಕ್ಕಮ್ಮ ಸೇರಿ ಗಂಭೀರವಾಗಿ ಗಾಯಗೊಂಡಿರುವ ಪೃಥ್ವಿ, ಸಚಿನ್, ಧರ್ಮಯ್ಯ ಅವರನ್ನು ಹಿಮ್ಸ್‌ಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್ ಕುಮಾರ್, ಶಾಸಕ ಹೆಚ್.ಕೆ. ಸುರೇಶ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಶಿಕ್ಷಕಿ ಚಿಕ್ಕಮ್ಮ ಅವರಿಗೆ ನೀಡಿದ್ದ ಸಮೀಕ್ಷೆ ಮುಗಿಸಲು ಭಾನುವಾರ ಕಡೆಯ ದಿನವಾಗಿತ್ತು. ಬಾಕಿ ಇದ್ದ ಮೂರು ಮನೆ ಸಮೀಕ್ಷೆಗೆ ಪತಿ ಸಹ ಜೊತೆಗೆ ತೆರಳಿದ್ದರು. ನಾಯಿಗಳು ದಾಳಿ ಮಾಡಿದ ವೇಳೆ ಅಲ್ಲೇ ಇದ್ದ ಪತಿ ಶಿವಕುಮಾರ್ ಹಾಗು ಸ್ಥಳೀಯ ಯುವಕರಾದ ಧರ್ಮಯ್ಯ, ಪೃಥ್ವಿ, ಸಚಿನ್ ಸೇರಿ ಏಳು ಜನರು ಶಿಕ್ಷಕಿಯನ್ನು ರಕ್ಷಿಸಲು ಯತ್ನಿಸಿದ್ದಾರೆ. ರಕ್ಷಣೆಗೆ ಯತ್ನಿಸಿದ 7 ಮಂದಿಗೂ ನಾಯಿಗಳು ಕಚ್ಚಿ ಗಾಯ ಗೊಳಿಸಿವೆ. ಅಲ್ಲೇ ಆಟವಾಡುತ್ತಿದ್ದ ಐದು ವರ್ಷದ ಬಾಲಕ ಕಿಶನ್ ಮೇಲೂ ನಾಯಿಗಳು ದಾಳಿ ನಡೆಸಿವೆ.

ತೀವ್ರವಾಗಿ ಗಾಯಗೊಂಡಿರುವ ಶಿಕ್ಷಕಿ ಚಿಕ್ಕಮ್ಮ ಹಾಗೂ ಉಳಿದ ಗಾಯಾಳುಗಳಿಗೆ ಬೇಲೂರು ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಮೂವರಿಗೆ ಹೆಚ್ಚು ಗಾಯಗಳಾಗಿದ್ದು, ಹಿಮ್ಸ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.



### ಶಾಸಕ ಹೆಚ್.ಕೆ.ಸುರೇಶ್ ಆಕ್ರೋಶ

ಸರ್ಕಾರದ ಸ್ವಾರ್ಥಕ್ಕಾಗಿ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮಸ್ಯೆಯಿಂದ ಶಿಕ್ಷಕರು ತೊಂದರೆ ಅನುಭವಿಸುವಂತಾಗಿದೆ ಎಂದು ಶಾಸಕ ಹೆಚ್.ಕೆ. ಸುರೇಶ್ ಆಕ್ರೋಶ ವ್ಯಕ್ತಪಡಿಸಿದರು.

ಸಮೀಕ್ಷೆ ಕಾರ್ಯಕ್ಕೆ ತೆರಳಿದ್ದ ಶಿಕ್ಷಕಿ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿ ಆಸ್ಪತ್ರೆಗೆ ತೆರಳಿ ಶಿಕ್ಷಕಿ ಆರೋಗ್ಯ ವಿಚಾರಿಸಿ ಮಾತನಾಡಿದ ಅವರು, ಸರ್ಕಾರಿ ಶಿಕ್ಷಕರ ಮೇಲೆ ಅನಗತ್ಯ ಒತ್ತಡ ಹಾಕಲಾಗುತ್ತಿದೆ. ನಿಗದಿತ ಅವಧಿಯೊಳಗೆ ಸಮೀಕ್ಷೆ ಮುಗಿಸಬೇಕೆಂದು ಅಧಿಕಾರಿಗಳು ಒತ್ತಾಯಿಸುತ್ತಿದ್ದಾರೆ. ಕೆಲ ಶಿಕ್ಷಕರಿಗೆ 300 ಮನೆಗಳ ಟಾರ್ಗೆಟ್ ನೀಡಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ನೆಟ್‌ವರ್ಕ್ ಸಮಸ್ಯೆ, ಬೀದಿ ನಾಯಿಗಳ ಹಾವಳಿ, ಮಲೆನಾಡಿನಲ್ಲಿ ಕಾಡಾನೆಗಳ ದಾಳಿ, ಜಾವಗಲ್ ಭಾಗದಲ್ಲಿ ಚಿರತೆಗಳ ಭೀತಿ ಇದೆ. ಇಂತಹ ಪರಿಸ್ಥಿತಿಯಲ್ಲಿಯೂ ಶಿಕ್ಷಕರಿಗೆ ನಿರ್ದಿಷ್ಟ ಅವಧಿ ನಿಗದಿ ಮಾಡಿ ಕೆಲಸಕ್ಕೆ ಒತ್ತಾಯಿಸುವುದು ಮಾನಸಿಕ ಹಿಂಸೆ ನೀಡುವಂತಾಗಿದೆ ಎಂದು ಶಾಸಕರು ಆರೋಪಿಸಿದರು. ವೈದ್ಯರಿಂದ ಚಿಕಿತ್ಸೆ ಕುರಿತು ಮಾಹಿತಿ ಪಡೆದ ಶಾಸಕರು, ಸರ್ಕಾರವು ಶಿಕ್ಷಕರ ಸುರಕ್ಷತೆ ಮತ್ತು ಸಮೀಕ್ಷೆ ಪ್ರಕ್ರಿಯೆ ಕುರಿತು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

### ಗಣತಿ ಮುಗಿಸಬೇಕೆಂಬ ಒತ್ತಡ

ಘಟನೆ ಬಗ್ಗೆ ಶಿಕ್ಷಕಿ ಪತಿ ಶಿವಕುಮಾರ್ ಅವರು ಮಾತನಾಡಿ, ಅಕ್ಟೋಬರ್ 7ರೊಳಗೆ ಗಣತಿ ಮುಗಿಸಬೇಕೆಂಬ ಒತ್ತಡ ಇದೆ. ಹಾಗಾಗಿ ರಜೆ ಇದ್ದರೂ ಗಣತಿಗೆ ತೆರಳಿದ್ದರು. ಪ್ರತಿಯೊಂದು ಮನೆಯಲ್ಲಿ 60 ಪ್ರಶ್ನೆ ಕೇಳಬೇಕು. ನೆಟ್‌ವರ್ಕ್ ಸರಿ ಇಲ್ಲ, ಆ್ಯಪ್ ಸರಿಯಾಗಿ ಕೆಲಸ ಮಾಡಲ್ಲ. ಮಹಡಿ ಹತ್ತಿ, ಇಳಿಯಬೇಕು. ಇಷ್ಟೆಲ್ಲ ಸವಾಲು ಎದುರಿಸಿ ಕೊಟ್ಟ ಸಮಯದಲ್ಲಿ ಗಣತಿ ಮುಗಿಸಲು ಆಗುತ್ತಾ, ಸರ್ಕಾರಕ್ಕೆ ಇದೆಲ್ಲಾ ಅರ್ಥವಾಗುವುದಿಲ್ಲವೇ ಎಂದು ಪ್ರಶ್ನಿಸಿದರು.

ರಜೆ ಇದ್ದರೂ ಬೇಗ ಮುಗಿಸಬೇಕೆಂದು ನಾನೂ ಪತ್ನಿ ಜೊತೆ ಹೋಗಿದ್ದೆ. ಮನೆಯೊಂದರ ಗೇಟ್ ಒಳಗೆ ಹೋದ ಕೂಡಲೇ ನಾಯಿ ಬಂದು ದಾಳಿ ನಡೆಸಿತು. ನಾನು ನಾಯಿಯಿಂದ ಬಚಾವ್ ಮಾಡಲು ಪ್ರಯತ್ನ ಮಾಡಿದೆ. ಅಷ್ಟರೊಳಗೆ ನನ್ನ ಪತ್ನಿ ಮೇಲೆ ದಾಳಿ ಮಾಡಿ ಗಂಭೀರ ಗಾಯಗೊಳಿಸಿದೆ. ಇನ್ನೂ ಏಳು ಜನರ ಮೇಲೆ ನಾಯಿ ದಾಳಿ ನಡೆಸಿದೆ. ನಾಲ್ವರು ಗಂಭೀರ ಗಾಯಗೊಂಡು ಹಾಸನದ ಆಸ್ಪತ್ರೆಗೆ ಕರೆತರಲಾಗಿದೆ. ದಾಳಿ ಮಾಡಿದ್ದ ನಾಯಿಯನ್ನೂ ಜನರು ಹೊಡೆದು ಕೊಂದಿದ್ದಾರಂತೆ. ಬೇಲೂರು ಪಟ್ಟಣದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಿದ್ದು, ಪುರಸಭೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

# ನಶಾ ಮುಕ್ತ ಜಿಲ್ಲೆಗಾಗಿ ಕ್ರಿಯಾ ಯೋಜನೆ ಸಿದ್ಧಪಡಿಸಿ

## ನಾರ್ಕೋರ್ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಲತಾಕುಮಾರಿ ಸೂಚನೆ

• ಪ್ರಜೋದಯ ವರದಿ

**ಹಾಸನ:** ನಶಾ ಮುಕ್ತ ಜಿಲ್ಲೆಯನ್ನಾಗಿ ಮಾಡುವ ನಿಟ್ಟಿನಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕ್ರಿಯಾ ಯೋಜನೆ ತಯಾರಿಸಿ ಸಲ್ಲಿಸುವಂತೆ ತಹಶೀಲ್ದಾರ್‌ಗಳಿಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ನಾರ್ಕೋರ್ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಶಾ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಪ್ರತಿಯೊಬ್ಬರು ಕೈ ಜೋಡಿಸಬೇಕು. ಅಧಿಕಾರಿಗಳು ತಮಗೆ ನೀಡಿರುವ ನಿಗದಿತ ಗುರಿ ಸಾಧಿಸಿ ಯಾವುದೇ ವಿಷಯವನ್ನು ಉದಾಸಿನ ಮಾಡದೆ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಉಪ ವಿಭಾಗಾಧಿಕಾರಿಗಳು ಮೇಲ್ವಿಚಾರಣೆ ಮಾಡುವಂತೆ ನಿರ್ದೇಶನ ನೀಡಿದರು.


ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು, ತಹಶೀಲ್ದಾರ್‌ಗಳು ಗಮನಹರಿಸಿ ಗಾಂಜಾ ಬೆಳೆಯುತ್ತಿರುವ ಬಗ್ಗೆ ಪರಿಶೀಲನೆ ಮಾಡಬೇಕು. ಡಿ-ಅಡಿಕ್ಷನ್ ಸೆಂಟರ್ ತೆರೆಯಲು ಪರವಾನಗಿ ಪಡೆದು ಪ್ರಾರಂಭಿಸಲು ಪ್ರೋತ್ಸಾಹ ನೀಡುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗೆ ಸೂಚಿಸಿದ ಅವರು, ಜಿಲ್ಲಾ ಮಟ್ಟದ ನಾರ್ಕೋರ್ ಸಮಿತಿಯನ್ನು ಪುನರ್ ರಚಿಸಿ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಸುತ್ತೋಲೆ ಹೊರಡಿಸಬೇಕು. 10 ತಂಡ ರಚಿಸಿ ತಾಲ್ಲೂಕು ಆರೋಗ್ಯ ಅಧಿಕಾರಿ, ಫಾರ್ಮಸಿಸ್ಟ್, ತಂಡದಲ್ಲಿರಬೇಕು. ಪ್ರತಿ ತಿಂಗಳು ಒಂದು ತಂಡ 10 ಔಷಧಿ ಅಂಗಡಿಗಳ ಮೇಲೆ ಅನಿರೀಕ್ಷಿತ ದಾಳಿ ನಡೆಸುವ ಜೊತೆಗೆ ವಿವರವಾದ ವರದಿ ನೀಡುವಂತೆ ತಿಳಿಸಿದರು.

ಬೇರೆಯವರ ಮಕ್ಕಳು ಡ್ರಗ್ ತೆಗೆದುಕೊಳ್ಳುತ್ತಿದ್ದಾರೆ ಮುಂದೆ ನಮ್ಮ ಮಕ್ಕಳೇ ತೆಗೆದುಕೊಳ್ಳುವ ಸಂದರ್ಭ ನೋಡಬೇಕಾಗುತ್ತದೆ ಎಂಬ ಎಚ್ಚರಿಕೆಯಿಂದ ಅಧಿಕಾರಿಗಳು ನಿಗಾವಹಿಸಿ ಕೆಲಸ ಮಾಡಬೇಕು. ಸಕಲೇಶಪುರ, ಬೇಲೂರು ಹಾಗು ಆಲೂರಿನ ಕಾಫಿ ತೋಟಗಳಿಗೆ ಹೊರ ರಾಜ್ಯಗಳಿಂದ ವಲಸೆ ಬರುವ ಕಾರ್ಮಿಕರ ಕುಟುಂಬಗಳ 18 ವರ್ಷದೊಳಗಿನ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಸೇರಿಸಲು ಕ್ರಮವಹಿಸುವಂತೆ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಮಕ್ಕಳನ್ನು ಕೆಲಸಕ್ಕೆ ಕರೆತರುವುದನ್ನು ತಡೆಯಲು ನಿರ್ದಾಕ್ಷಿಣ್ಯವಾಗಿ ಕ್ರಮವಹಿಸಬೇಕು. ಕಾರ್ಮಿಕರಿಗೆ ಅರಿವು ಕಾರ್ಯಕ್ರಮ ನಡೆಸುವುದರ ಮೂಲಕ ಹೆಚ್ಚಿನ ಜಾಗೃತಿ ಮೂಡಿಸಬೇಕು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪತ್ತೆಹಚ್ಚಲು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಕ್ರಮ ವಹಿಸಬೇಕು. ಮಕ್ಕಳು ವ್ಯಸನಗಳಿಗೆ ತುತ್ತಾಗಿ ಜೀವನವನ್ನು ಹಾಳು ಮಾಡಿಕೊಳ್ಳುವುದರ ಜೊತೆಗೆ ಕುಟುಂಬಕ್ಕೆ ನಷ್ಟ ಉಂಟು ಮಾಡುವುದಲ್ಲದೆ ಸಮಾಜ ಹಾಗೂ ದೇಶದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಾರೆಂದು ತಿಳಿಸಿದರು.

ವ್ಯಸನಗಳಿಗೆ ತುತ್ತಾಗುತ್ತಿರುವ ಮಕ್ಕಳ ನಡವಳಿಕೆ ಮತ್ತು ಚಲನವಲನ

» ನಾಲ್ಕನೇ ಪುಟದಲ್ಲಿ




### ನಾರ್ಕೋರ್ ಡಾಗ್ ಸ್ಕ್ವಾಡ್ ಬಳಸಿಕೊಳ್ಳಿ

ಹೋಂ ಸ್ಟೇ, ರೆಸಾರ್ಟ್‌ಗಳ ಸಂಖ್ಯೆ ಎಷ್ಟಿದೆ ಎಂದು ಪಟ್ಟಿ ಮಾಡಿ ಕಡ್ಡಾಯವಾಗಿ ಅವುಗಳ ಪರಿಶೀಲನೆ ಮಾಡಬೇಕು. ರೈಲುಗಳ ಮೂಲಕ ಹೊರ ರಾಜ್ಯಗಳಿಂದ ಬರುವ ಗಾಂಜಾವನ್ನು ಪತ್ತೆ ಹಚ್ಚಿ ವಶಪಡಿಸಿಕೊಳ್ಳಲು ಕ್ರಮ ವಹಿಸುವಂತೆ ರೈಲ್ವೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಗಾಂಜಾ ಸಾಗಾಣಿಕೆ ಪತ್ತೆಗಾಗಿ ನಾರ್ಕೋರ್ ಡಾಗ್ ಸ್ಕ್ವಾಡ್ ಬಳಸಿಕೊಳ್ಳಬೇಕು. ಡ್ರಗ್ ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿದಿನ ಪರಿಶೀಲನೆ ಮಾಡಬೇಕು. ಈ ನಿಟ್ಟಿನಲ್ಲಿ ರೈಲ್ವೆ ಸಿನಿಯರ್ ಸೆಕ್ಯೂರಿಟಿ ಕಮೀಷನರ್ ಗೆ ಪತ್ರ ಬರೆಯಲು ಕ್ರಮವಹಿಸುವಂತೆ ಜಿಲ್ಲಾಧಿಕಾರಿ ತಿಳಿಸಿದರು.

> **ಸಕಲೇಶಪುರ ಭಾಗದಲ್ಲಿ ಗಾಂಜಾ ಬೆಳೆಯುತ್ತಿದ್ದಾರೆಂದು ಕೇಳಿ ಬರುತ್ತಿದೆ. ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಜಿಲ್ಲೆಯ ಎಲ್ಲಾ ಹಾಸ್ಟೆಲ್‌ಗಳಲ್ಲಿ ಮಕ್ಕಳ ಚಟುವಟಿಕೆಗಳ ಬಗ್ಗೆ ನಿಗಾವಹಿಸಲು ಸಭೆ ನಡೆಸಿ ವಾರ್ಡನ್‌ಗಳಿಗೆ ಸೂಚನೆ ನೀಡಬೇಕು.**
> **-ಮೊಹಮ್ಮದ್ ಸುಜೀತ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

# ಗಣತಿಗೆ ತೆರಳುತ್ತಿದ್ದ ಶಿಕ್ಷಕಿಗೆ ಅಪಘಾತ

• ಪ್ರಜೋದಯ ವರದಿ

**ಹೊಳೆನರಸೀಪುರ:** ಜಾತಿಗಣತಿಗೆ ತೆರಳುತ್ತಿದ್ದ ಶಿಕ್ಷಕಿ ಸ್ಕೂಟರ್‌ಗೆ ಬೀದಿ ನಾಯಿ ಅಡ್ಡ ಬಂದು ಅಪಘಾತ ಸಂಭವಿಸಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಭಾನುವಾರ ತಾಲ್ಲೂಕಿನ ವಡ್ಡರಹಳ್ಳಿ ಗ್ರಾಮದಲ್ಲಿ ನಡೆದಿದೆ. ವಡ್ಡರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ರಾಧಾ ಗಾಯಾಳು.

ರಾಧಾ ಅವರು ಗಣತಿ ಕಾರ್ಯಕ್ಕಾಗಿ ಬೆಳಿಗ್ಗೆ 10 ಗಂಟೆ ಸುಮಾರಿಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದಾಗ ಬೀದಿ ನಾಯಿ ಸಿಲುಕಿಕೊಂಡಿದ್ದು, ಶಿಕ್ಷಕಿ ರಸ್ತೆಗೆ ಬಿದ್ದು ಗಂಭೀರವಾಗಿ ಗಾಯಗೊಂಡು ಪ್ರಜ್ಞೆತಪ್ಪಿ ಬಿದ್ದಿದ್ದರು. ಸ್ಥಳೀಯರು ಶಿಕ್ಷಕಿಯನ್ನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.


# ರೈತರು ವಾಣಿಜ್ಯ ಬೆಳೆ ಬೆಳೆಯುವುದನ್ನು ರೂಢಿಸಿಕೊಳ್ಳಿ

## ಕೆ.ಎಂ.ಶಿವಲಿಂಗೇಗೌಡ ಸಲಹೆ: ಸ್ವಯಂ ಚಾಲಿತ ರೇಷ್ಮೆ ನೂಲು ಬಿಡಿಸುವ ಘಟಕ ಉದ್ಘಾಟನೆ

• ಪ್ರಜೋದಯ ವರದಿ

**ಬಾಣಾವರ:** ರೇಷ್ಮೆ ಬೆಳೆಗೆ ಹೆಚ್ಚಿನ ಬೇಡಿಕೆ ಇದ್ದು, ಬೆಳೆಗಾರರಿಗೆ ಸರ್ಕಾರದಿಂದ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿರುವುದನ್ನು ಬಳಸಿಕೊಂಡು ಬೆಳೆಗಳನ್ನು ಬೆಳೆಯುವುದನ್ನು ರೂಢಿಸಿಕೊಳ್ಳಬೇಕೆಂದು ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ತಿಳಿಸಿದರು.

ಹೋಬಳಿಯ ಬೆಂಡೆಕೆರೆ ಗ್ರಾಮದಲ್ಲಿ ಭಾನುವಾರ ಮೆರಾಜ್ ಟ್ರೇಡರ್ಸ್ ಸಂಸ್ಥೆಯಿಂದ ತೆರೆದಿರುವ ಸ್ವಯಂ ಚಾಲಿತ ರೇಷ್ಮೆ ನೂಲು ಬಿಡಿಸುವ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಬೆಂಡೆಕೆರೆ ಗ್ರಾಮದಲ್ಲಿ ಪ್ರಾರಂಭವಾಗಿರುವ ಈ ಘಟಕವು ಅರಸೀಕೆರೆ ತಾಲ್ಲೂಕಿನ ಮೊದಲ ಸ್ವಯಂ ಚಾಲಿತ ರೇಷ್ಮೆ ನೂಲು ಬಿಡಿಸುವ ಘಟಕವಾಗಿದೆ. ಇದರಿಂದ



ರೇಷ್ಮೆ ಬೆಳೆಗಾರರಿಗೆ ಬಹಳ ಅನುಕೂಲಕರವಾಗಿದೆ ಎಂದರು.

ಹಿಂದೆ ರೈತರು ರೇಷ್ಮೆಯನ್ನು ರಾಮನಗರ ಸೇರಿ ಇತರ ಕಡೆಗಳಲ್ಲಿ ಮಾರಾಟ ಮಾಡಬೇಕಾಗುತ್ತಿತ್ತು. ಇದರಿಂದ ರೈತರಿಗೆ ಸಾಗಾಟ ವೆಚ್ಚ ಹೆಚ್ಚಾಗಿ, ಸಮಯವೂ ವ್ಯಯವಾಗುತ್ತಿತ್ತು. ಆದರೆ, ಬೆಂಡೆಕೆರೆ ಗ್ರಾಮದ ಮುನಾವರ್ ಪಾಷಾ ಹಾಗು ರಾಮ

» ನಾಲ್ಕನೇ ಪುಟದಲ್ಲಿ

# ಶಿರಾಡಿಘಾಟ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್



• ಪ್ರಜೋದಯ ವರದಿ

**ಸಕಲೇಶಪುರ:** ಸಾಲು-ಸಾಲು ರಜೆ ಮುಗಿದ ಹಿನ್ನಲೆ ಭಾನುವಾರ ಜನರು ತಮ್ಮ ಊರುಗಳಿಗೆ ವಾಪಾಸ್ ಆಗುತ್ತಿದ್ದು, ರಾಷ್ಟ್ರೀಯ ಹೆದ್ದಾರಿ-75ರಲ್ಲಿ ಟ್ರಾಫಿಕ್ ಜಾಮ್ ಉಂಟಾಗಿ ಪ್ರಯಾಣಿಕರು ಪರದಾಡುವಂತಾಯಿತು.

ತಾಲ್ಲೂಕಿನ ದೋಣಿಗಾಲ್ ಹಾಗು ಶಿರಾಡಿಘಾಟ್ ರಸ್ತೆಯಲ್ಲಿ 3 ಕಿ.ಲೋ. ಮೀಟರ್ ವಾಹನಗಳು ನಿಂತಿದ್ದು, ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ ವಾಹನ ಸವಾರರು ಹೈರಾಣದರು.ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಪೊಲೀಸರ ಹರಸಾಹಸ ಪಡಬೇಕಾಯಿತು. ಬೆಂಗಳೂರು-ಮಂಗಳೂರು ಸಂಪರ್ಕ ಕಲ್ಪಿಸುವ ಪ್ರಮುಖ ರಾಷ್ಟ್ರೀಯ ಹೆದ್ದಾರಿ 75 ಆಗಿದ್ದು, ಭಾರೀ ಸಂಖ್ಯೆಯಲ್ಲಿ ವಾಹನಗಳು ಬಂದ ಹಿನ್ನಲೆಯಲ್ಲಿ ರಸ್ತೆಯಲ್ಲಿ ವಾಹನ ಸವಾರರು ಗಂಟೆಗಟ್ಟಲೇ ನಿಲ್ಲಬೇಕಾಯಿತು.

## ಅಣೆಕಟ್ಟೆ ಭರ್ತಿಯಾಗಿ 3 ತಿಂಗಳು ಕಳೆದರೂ ಸರ್ಕಾರಕ್ಕೆ ನಿರಾಸಕ್ತಿ | ಈ ವರ್ಷವೂ ಸಿಎಂ, ಡಿಸಿಎಂ ಆಗಮನಕ್ಕಾಗಿ ಕಾಯುವಿಕೆ

# ಹೇಮಾವತಿಗೆ ಬಾಗಿನ ಅರ್ಪಿಸಲು ಯಾರಿಗೂ ಇಲ್ಲ ಆಸಕ್ತಿ

• ಪ್ರಜೋದಯ ವರದಿ

**ಹಾಸನ:** ಹೇಮಾವತಿ ಅಣೆಕಟ್ಟೆ ಭರ್ತಿಯಾಗಿ 3 ತಿಂಗಳು ಕಳೆದರೂ ಬಾಗಿನ ಅರ್ಪಿಸಲು ಸರ್ಕಾರ ನಿರಾಸಕ್ತಿ ಧೋರಣೆ ತಾಳಿದೆ.

ಈ ವರ್ಷದಂತೆ ಕಳೆದ ವರ್ಷವೂ ಜುಲೈ ತಿಂಗಳ ಮೊದಲ ವಾರದಲ್ಲೇ ಜಲಾಶಯ ಭರ್ತಿಯಾಗಿತ್ತು. ಆದರೆ, ಆ ಸಮಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕೆ.ಎನ್. ರಾಜಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈಯಿಂದಲೇ ಬಾಗಿನ ಅರ್ಪಿಸಬೇಕೆಂದು ಹಠ ಹಿಡಿದಿದ್ದರಿಂದ ವಿಳಂಬವಾಗಿತ್ತು. ಕೊನೆಗೂ ಮುಖುಮಂತ್ರಿ ಬಾರದೆ ಇದ್ದರಿಂದ ವಿಧಿ ಇಲ್ಲದೇ 2024 ಸೆ.30ರಂದು ಕೆ.ಎನ್.ರಾಜಣ್ಣ ಅವರ ನೇತೃತ್ವದಲ್ಲಿ ಬಾಗಿನ ಅರ್ಪಿಸಲಾಗಿತ್ತು.

ಆದರೆ, ಈ ಬಾರಿ ಜಿಲ್ಲಾ ಉಸ್ತುವಾರಿ ಸಚಿವರು ಬದಲಾಗಿ, ಕ್ರಿಯಾಶೀಲ ಸಚಿವರು ಎನಿಸಿಕೊಂಡಿರುವ ಕೃಷ್ಣೇಬೈರೇಗೌಡ ಅವರು ಬಂದರೂ, ಅಕ್ಟೋಬರ್ ತಿಂಗಳಾದರೂ ಇನ್ನೂ ಹೇಮಾವತಿ ಜಲಾಶಯಕ್ಕೆ ಬಾಗಿನ ಅರ್ಪಣೆಗೆ ಯಾರೊಬ್ಬರೂ ಆಸಕ್ತಿ ತೋರಿದಂತೆ ಕಾಣುತ್ತಿಲ್ಲ.

ಈಗಾಗಲೇ ಸಿದ್ದರಾಮಯ್ಯ ಅವರು ರಾಜ್ಯದ ಪ್ರಮುಖ ಜಲಾಶಯಗಳಾದ ಕೆಆರ್‌ಎಸ್, ಕಬಿನಿ ಹಾಗು ಭದ್ರಾ ಜಲಾಶಯಕ್ಕೆ ಸಾಂಪ್ರದಾಯಿಕವಾಗಿ ಬಾಗಿನ ಅರ್ಪಿಸಿದ್ದಾರೆ. ಆದರೆ, ಕಳೆದ ಮೂರು ತಿಂಗಳಿನಿಂದ ಒಡಲು ತುಂಬಿ ನಿಂತಿರುವ ಹೇಮಾವತಿ ಜಲಾಶಯಕ್ಕೆ ಎಂದು ಬಾಗಿನ ಅರ್ಪಿಸಲು ಸಮಯ ನೀಡದೆ ಮುಂದೂಡಿಕೊಂಡೇ ಬರುತ್ತಿದ್ದಾರೆ.

ಹಾಸನ, ತುಮಕೂರು, ಮಂಡ್ಯ, ಮೈಸೂರು ನಾಲ್ಕು ಜಿಲ್ಲೆಗಳ ಒಟ್ಟು 7,89,520 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಕಾವೇರಿ ಕಣಿವೆಯ ಪ್ರಮುಖ ಜಲಾಶಯ ಇದಾಗಿದೆ. ಸಾಂಪ್ರದಾಯಿಕವಾಗಿ ಬಾಗಿನ ಅರ್ಪಿಸುವುದು ಸರ್ಕಾರದ ಜವಾ ಬ್ದಾರಿ. ಈವರೆಗೂ ಸರ್ಕಾರವಾಗಲಿ ಅಥವಾ ಜಿಲ್ಲಾಡಳಿತವಾಗಲಿ ಹೇಮಾವತಿ ಜಲಾಶಯಕ್ಕೆ ಬಾಗಿನ ಅರ್ಪಣೆಗೆ ಆಸಕ್ತಿ ತೋರದಿರುವುದು ಜಿಲ್ಲೆಯ ಜನರ ಅಸಮಾಧಾನಕ್ಕೆ ಕಾರಣವಾಗಿದೆ.



ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ಒಂದಾಗಿರುವ ಹೇಮಾವತಿ ಜಲಾಶಯ ಕೆಆರ್‌ಎಸ್ ಜಲಾಶಯಕ್ಕೆ ತನ್ನದೇಯಾದ ಕೊಡುಗೆ ನೀಡುತ್ತಿದೆ. ಬಹುತೇಕ ಜಲಾಶಯಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು, ಕೆಲವೆಡೆ ಮುಖ್ಯಮಂತ್ರಿ ಬಾಗಿನ ಅರ್ಪಿಸಿದ್ದಾರೆ.

### 34ನೇ ಬಾರಿಗೆ ಜಲಾಶಯ ಭರ್ತಿ

1969-70ನೇ ಸಾಲಿನಲ್ಲಿ ಹಾಸನ ತಾಲ್ಲೂಕಿನ ಗೊರೂರು ಬಳಿ ಹೇಮಾವತಿ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಾಣ ಕಾರ್ಯ ಆರಂಭವಾಗಿ, 1980 ರಲ್ಲಿ ಕಾಮಗಾರಿ ಪೂರ್ಣಗೊಂಡಿತು. ಜಲಾಶಯದಲ್ಲಿ ನೀರಿನ ಸಂಗ್ರಹಣೆ ಆರಂಭವಾಗಿ ಈ ವರೆಗೆ 34ನೇ ಬಾರಿ ಭರ್ತಿಯಾಗಿದೆ.

2022 ರಲ್ಲಿ ಜುಲೈ 25 ರಂದು ಹಾಗು 2020ರಲ್ಲಿ ಆಗಸ್ಟ್ 21ರಂದು ಉಸ್ತುವಾರಿ ಸಚಿವರಾಗಿದ್ದ ಕೆ.ಗೋಪಾಲಯ್ಯ ಬಾಗಿನ ಅರ್ಪಿಸಿದ್ದರು. 2023ರಲ್ಲಿ ಬರಗಾಲ ಇದ್ದರಿಂದ ನೀರಿನ ಬಾಗಿನ ಅರ್ಪಿಸಿರಲಿಲ್ಲ. 2024 ಸೆ.30ರಂದು ಕೆ.ಎನ್.ರಾಜಣ್ಣ ಅವರು ಬಾಗಿನ ಅರ್ಪಿಸಿದರು. ಈ ವರ್ಷ ಮಳೆಗಾಲ ಮುಗಿಯುವ ಹಂತಕ್ಕೆ ಬಂದರೂ ಬಾಗಿನ ಅರ್ಪಣೆಗೆ ಕಾಲಕೂಡಿ ಬಂದಿಲ್ಲ.

### ಮೇ ತಿಂಗಳಲ್ಲೇ ಯಗಚಿ, ವಾಟೆಹೊಳೆ ಭರ್ತಿ

ಮುಂಗಾರು ಆರಂಭಕ್ಕೂ ಮೊದಲೇ ಪೂರ್ವ ಮುಂಗಾರಿನ ಆರ್ಭಟಕ್ಕೆ ಯಗಚಿ ಜಲಾಶಯ ಭರ್ತಿಯಾಗುವ ಮೂಲಕ ಅಚ್ಚರಿ ಮೂಡಿಸಿತ್ತು. ಮೇ 24 ರಂದೇ ಜಲಾಶಯ ಭರ್ತಿಯಾದ ಹಿನ್ನಲೆ ಶಾಸಕ ಹೆಚ್.ಕೆ. ಸುರೇಶ್ ಅವರು ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಿದ್ದರು. ಜಿಲ್ಲೆಯ ಅತೀ ಚಿಕ್ಕ ಜಲಾಶಯವಾಗಿರುವ ಆಲೂರು ತಾಲ್ಲೂಕಿನಲ್ಲಿರುವ ವಾಟೆಹೊಳೆ ಜಲಾಶಯವೂ ಕೂಡ ಮೇ ತಿಂಗಳಲ್ಲೇ ಭರ್ತಿಯಾಗಿತ್ತು. ಶಾಸಕ ಸಿಮೆಂಟ್ ಮಂಜು ಅವರು ಕೂಡ ಬಾಗಿನ ಅರ್ಪಿಸಿದ್ದರು. ಹೇಮಾವತಿ ಜಲಾಶಯಕ್ಕೂ ಶಾಸಕ ಸಿಮೆಂಟ್ ಮಂಜು ಅವರು ಸಾಂಪ್ರದಾಯಿಕವಾಗಿ ಬಾಗಿನ ಅರ್ಪಿಸಿ 2 ತಿಂಗಳು ಕಳೆದರೂ ಸರ್ಕಾರ ಮಾತ್ರ ತಲೆಕೆಡಿಸಿಕೊಂಡಿಲ್ಲ.

### ಜಲಾಶಯದ ನೀರಿನ ಮಟ್ಟ

ಭಾನುವಾರ ಬೆಳಿಗ್ಗೆ 6 ಗಂಟೆಗೆ ಕೊನೆ ಗೊಂಡಂತೆ 2,922 ಅಡಿ (37.103 ಟಿಎಂಸಿ) ಗರಿಷ್ಠ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿರುವ ಹೇಮಾವತಿ ಜಲಾಶಯಲ್ಲಿ ಪ್ರಸ್ತುತ 2917.91 ಅಡಿ (33.235 ಟಿಎಂಸಿ) ನೀರು ಸಂಗ್ರಹವಾಗಿದೆ. ಜಲಾಶಯಕ್ಕೆ 4,552 ಕ್ಯೂಸೆಕ್ ಒಳಹರಿವು ಬರುತ್ತಿದ್ದು, ಒಟ್ಟು 6610 ಕ್ಯೂಸೆಕ್ ನೀರನ್ನು ಹೊರಬಿಡಲಾ ಗುತ್ತಿದೆ. ಇದರಲ್ಲಿ ಹೇಮಾವತಿ ಎಡದಂಡೆ ನಾಲೆಗೆ 4150 ಕ್ಯೂಸೆಕ್, ಬಲದಂಡೆ ನಾಲೆಗೆ 300 ಕ್ಯೂಸೆಕ್, ನದಿಗೆ 11400 ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದೆ.

C M Y K

# ಹೆದ್ದಾರಿಯ ಅಡ್ಡಹಾದಿಗುಂಟ



**ಅದು** ರಾಷ್ಟ್ರೀಯ ಹೆದ್ದಾರಿ ಎನ್.ಎಚ್.17 ಎಡೆಬಿಡದ ವಾಹನಗಳ ಸಂಚಾರ. ಮಧ್ಯೆ ಮಧ್ಯೆ ಅಪಾಯಕಾರಿ ತಿರುವುಗಳು. ಹೊಸಬರಿಗೆ ಅಪರಿಚಿತರಿಗೆ ಮುಂದೆ ತಿರುವು ಇದೆ ಎಂದು ತಿಳಿಯಲಾಗದ, ಅವಘಡವೇನಾದರೂ ಸಂಭವಿಸಿದರೆ ನೇರವಾಗಿ ಪ್ರಪಾತದ ಪಾಲಾ ಗುವ ಭಯವನ್ನು ಹೊಂದಿದ ಭೀಕರ ತಿರುವುಗಳನ್ನು ಹೊಂದಿದ ವಕ್ರ ಮಹಾರಸ್ತೆ ಅದು. ಈಗೀಗ ಅಪಘಾತಗಳ ಸಂಖ್ಯೆ ಕೊಂಚ ಕಡಿಮೆಯೆಂದೆ ಹೇಳಬೇಕು. ಆದರೂ ಸೀಜನ್‌ಗೆ ದಿನಕ್ಕೆ ನಾಲ್ಕು ಅಪಘಾತ ಎರಡು ಸಾವು ಅಪರೂಪವಲ್ಲ, ಆದರೆ ಅದೊಂದು ಕಾಲವಿತ್ತು. ಮರಣ ಮೃದಂಗ ನಿರಂತರವಾಗಿ ಬಾರಿಸುತ್ತಿದ್ದ ಕಾಲ. ಮ್ಯಾಂಗನೀಸ ಅದಿರು ರಾಜನ ಹಾರಾಟದ ಕಾಲ. 300 ಕಿ.ಮೀ ಅಂತರದಲ್ಲಿ ದಿನಕ್ಕೆ ಎಳೆಂಟು ಸಾವು ಸಾಮಾನ್ಯವಾಗಿತ್ತು. ವ್ಯಕ್ತಿಯೊಬ್ಬ ಸತ್ತರೆ ಇರುವೆ ಸತ್ತಂತೆ ಎಂಬಂತೆ ಮತ್ತದೇ ವೇಗದ ಲಾರಿಗಳು. ಇನ್ನು ದನಕರುಗಳ ಪಾಡಂತೂ ಕೇಳುವವರೇ ಇರಲಿಲ್ಲ. ಹಣದ ಹಿಂದೆ ಬಿದ್ದ ಜಗತ್ತು ಅದು. ಹುಬ್ಬಳ್ಳಿ ಕಾರವಾರದ ನಡುವಿನ ಅರಬೈಲ ಘಾಟನ್ನು ದಾಟುವುದೆಂದರೆ ಎಂಥಹ ಚಾಲಕನು ಬೆಸ್ತು ಬೀಳುತ್ತಾನೆ. ಇನ್ನು ಕೆಳಗಿಳಿಯುತ್ತಿದ್ದಂತೆ ಸ್ವಲ್ಪ ಸಮತಟ್ಟಾದ ರಸ್ತೆ. ಆದರೆ ಮತ್ತೆ ಮುಂದೆ ಮುಂದೆ ಹೋದಂತೆ ತಿರುವುಗಳು ಬಹಳ. ಹಿರಿಯೂರಿನಿಂದ ಮುಂದೆ ಹತ್ತು ಕೀ.ಮೀ.ದೂರದಲ್ಲಿ ಒಂದು ಅಪಾಯಕಾರಿ ತಿರುವು. ಎರಡು ಹೆಜ್ಜೆ ಮುಂದೆ ಕರಾಳ ಇತಿಹಾಸ ಹೊಂದಿದ್ದೊಂದು ಸೇತುವೆ.

ಅದೊಂದು ಮಟಮಟ ಮಧ್ಯಾಹ್ನ. ಬಹುಶಃ ಆ ದಂಪತಿಗಳು ಹುಬ್ಬಳ್ಳಿಯಿಂದ ಕಾರವಾರ ದತ್ತ ಪಯಣಿಸುತ್ತಿದ್ದರು. ಸ್ವತಃ ಪತಿಯೇ ವಾಹನ ಚಲಾಯಿಸುತ್ತಿದ್ದರಿಂದ ಪತ್ನಿ ನಿರುಮ್ಮಳಾಗಿ ಕುಳಿತಿದ್ದಳು. ತಿರುವಿನಲ್ಲಿ ದಾಟಿ ಇನ್ನೇನು ಮುಂದೆ ಬಂದೆ ಎನ್ನುವಷ್ಟರಲ್ಲಿ ಎದಿರಿನಿಂದ ಅದಿರು ಲಾರಿಯೊಂದು ಯಮಧೂತನಂತೆ ಅಡ್ಡವಾಗಲು ಆ ಕಾರಿನ ಚಾಲಕ ಬಲಕ್ಕೆ ಕಾರನ್ನು ಹೊರಳಿಸಿದ್ದೆ ತಡ. ಕಾರು ಸೇತುವೆಗೆ ಗುದ್ದಿದ ರಭಸಕ್ಕೆ ಚಾಲಕನ ಸ್ಥಾನದಲ್ಲಿದ್ದ ಆಕೆಯ ಪತಿ ಕ್ಷಣಾರ್ಧದಲ್ಲಿ ಒದ್ದಾಡಿ ಮೃತಪಟ್ಟಿದ್ದ. ಎರಡು ಕಾಲುಗಳು ಕತ್ತರಿಸಿ ಬಿದ್ದಿದ್ದವು. ಗಂಭೀರವಾಗಿ ಗಾಯಗೊಂಡ ಆಕೆ ಆ ಸ್ಥಿತಿಯಲ್ಲಿಯೇ ಯಾತನಾ ಭರಿತ ಧ್ವನಿಯಲ್ಲಿ ರೋಧಿಸತೊಡಗಿದಳು. ನೀರು, ನೀರು ಎಂದು ಜೀವದ ಕೊನೆಯ ಬೇಡಿಕೆಗೆ ತಳಮಳಿಸತೊಡಗಿದಳು. ಆಸುಪಾಸು ಯಾರು ಇಲ್ಲದ ಸಮಯ ಜೊತೆಗೆ ಸ್ಥಳವು ಕೂಡ. ಅಷ್ಟರಲ್ಲೇ ಮೋಟಾರು ಬೈಕೊಂದು ರಭಸವಾಗಿ ಬಂದದ್ದು, ಸಡನ್ನಾಗಿ ಬ್ರೇಕ ಒತ್ತಿ ನಿಂತಿತು. ಯುವಕರಿಬ್ಬರು ಓಡೋಡಿ ಬಂದರು.

ಏ,ಏ,ಏ, ಅಯ್ಯೋ! ಏನಾಯ್ತಾ?, ಬದಕರ ಇಲ್ವಾ? ಪಾಪ.ಯಾವೂರವರೇನಾ?. ಎನ್ನುತ್ತಾ ಬಂದವರ ಮುಖದಲ್ಲಿ ಗಾಬರಿ. ಅಪಘಾತಗೊಂಡವರ ಬಗ್ಗೆ ಅನುಕಂಪದಿಂದ ಸಹಾಯ ಮಾಡಬಂದರು. ಅವರು ಪರವೂರಿನವರಲ್ಲ, ಅಲ್ಲಿಂದ ಸುಮಾರು ನಾಕೈದು ಫರ್ಲಾಂಗ ದೂರದ ಕೆರೆಕೊಪ್ಪದವರು. ಸ್ನೇಹಿತರು. ಕಾರಿನ ಹತ್ತಿರ ಬರುತ್ತಿದ್ದಂತೆ ಒಳಗಿನ ಭೀಭತ್ಸ ದೃಶ್ಯಕ್ಕೆ ಕ್ಷಣ ವಿಚಲಿತಗೊಂಡರು. ಅಷ್ಟೇ, ಮರುಕ್ಷಣ ಕಾರಿನಲ್ಲಿದ್ದವರ ಕಡೆ ಗಮನ ಹೋಗುತ್ತಲೂ ಆಗಲೇ ಮೃತನಾದ ಪತಿ ಹಾಗೂ ಅರೆಜೀವವಾಗಿ ಬಿದ್ದ ಪತ್ನಿ ದೃಷ್ಟಿಗೆ ಬಿದ್ದರು. ಕೈ ಕುತ್ತಿಗೆಯ ತುಂಬಾ ಬಂಗಾರದ, ವಜ್ರದ ಆಭರಣ ಧರಿಸಿದ್ದ ಆಕೆ ಆಘಾತಗೊಂಡಿದ್ದಳು. ಆದರೆ ಬದುಕುವಂತಿದ್ದಳು. ಪ್ರಜ್ಞಾವಸ್ಥೆಯಲ್ಲಿದ್ದಳು. ತರುಣರ ಕಣ್ಣುಗಳಲ್ಲಿ ಈಗ ಆವರೆಗಿನ ಅನುಕಂಪ ಸತ್ತುಹೋಗಿತ್ತು. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಪಕ್ಕದಲ್ಲೆ ಆಕೆಯ ಒಡವೆಗಳ ಪೆಟ್ಟಿಗೆ, ಹಣದ ಚೀಲ ಅರೆತೆರೆದು ಕೆಲವೆಲ್ಲಾ ಸ್ವಲ್ಪ ಚೆಲ್ಲಾಪಿಲ್ಲಿಯಾಗಿದ್ದವು. ಬಹುಶಃ ಯಾವುದೋ ಆಭರಣ ಮಳಿಗೆಯ ಕುಟುಂಬಸ್ಥರೆಂದು ತಿಳಿಯುವಂತಿತ್ತು. ಅವರನ್ನು ಕಂಡ ಕೂಡಲೇ ಆಕೆ ಕ್ಷೀಣ ಸ್ವರದಲ್ಲಿ ಮತ್ತೆ ನೀರು, ನೀರು ಎಂದು ಗೋಗರೆದಳು. ಆದರೆ ತರುಣರ ಮನಸ್ಸಿನ ತುಂಬಾ ಈಗ ಕರುಣೆ ಎಂಬ ಸ್ಥಳದಲ್ಲಿ ಲೋಭವೆಂಬ ಪಿಶಾಚಿ ಆಕ್ರಮಿಸಿಕೊಂಡಿತ್ತು. ಸಣ್ಣ ಪುಟ್ಟ ವ್ಯವಹಾರ ಮಾಡಿಕೊಂಡು ಏನೋ ಮಜಾ ಉಡಾಯಿಸುತ್ತಿದ್ದ ತರುಣರಿಗೆ ಒಮ್ಮೆಲೆ ಇಷ್ಟು ಸಂಪತ್ತನ್ನು ನೋಡಿ ಕಳೆದುಕೊಳ್ಳಲು ಮನಸ್ಸಾಗಲಿಲ್ಲ. ಈಗವರು ತಡ ಮಾಡಲಿಲ್ಲ. ಒಬ್ಬ ಭರಭರನೆ ಆಕೆಯ ಕೈಗಳಲ್ಲಿದ್ದ ಬಳೆಗಳನ್ನು ಬಲವಂತವಾಗಿ ಎಳೆದುತೆಗೆದ. ಆಕೆ ಚೀರತೊಡಗಿದರೂ ಬಿಡದೆ ಇನ್ನೊಬ್ಬ ಕುತ್ತಿಗೆಗೆ ಕೈಹಾಕಿ ಸರಗಳನ್ನು ಸೆಳೆಯತೊಡಗಿದ. ಆ ರಭಸಕ್ಕೆ ಆಕೆಯ ಕುತ್ತಿಗೆ ಸೆರೆ ಕಿತ್ತು ಹೋಯ್ತು. ಆಕೆ ನಾಲ್ಕೈದು ನಿಮಿಷಗಳಲ್ಲಿ ಪ್ರಾಣ ಬಿಟ್ಟಳು. ಇಬ್ಬರಿಗೂ ಚರ್ಚಿಸಲು ಸಮಯವಿರಲಿಲ್ಲ. ತರುಣರಿಬ್ಬರು ಮತ್ಯಾರಾದರೂ ಕಂಡಾರೆಂಬ ಭಯದಲಿ ದಡಬಡಾಯಿಸಿ ಸೆಳೆದುಕೊಂಡ ಒಡವೆ, ಬಂಗಾರದ ಪೆಟ್ಟಿಗೆ, ಹಣದ ಚೀಲ ಎಲ್ಲವನ್ನು ಎತ್ತಿಕೊಂಡು ಪಲಾಯನಗೈದರು.

ವರ್ಷಗಳು ಉರುಳಿದವವು. ಎಲ್ಲವನ್ನು ಬದಲಾಯಿಸುವ ಕಾಲಕ್ಕೆ ತಡೆಯಿಲ್ಲ. ಮಹೇಂದ್ರ ನೀಗ ಮ್ಯಾಂಗನೀಸ ಅದಿರು ವ್ಯವಹಾರದಲ್ಲಿ ತೊಡಗಿಕೊಂಡಿದ್ದಾನೆ. ಮರಳು ಮಾಫಿಯಾ ಕೂಡ ಅವನ ವ್ಯವಹಾರಗಳಲ್ಲಿ ಒಂದು. ಎಡಬಿಡದ ದುಡಿಮೆ ಆತನದು. ಪ್ರಭಾವಿ ರಾಜ ಕಾರಣಿಗಳ ಸ್ನೇಹಿತ ಕೂಡ. ಹಾಗಂತ ಗೆಳೆಯ ಪ್ರಕಾಶ ಸುಮ್ಮನೆ ಕುಳಿತಿಲ್ಲ.ಒಂದೇ ಬುದ್ಧಿಯ ಜನ ಎಲ್ಲವನ್ನು ಒಟ್ಟಾಗಿಯೇ ಮಾಡಿದವರು ಹಾಗಿರುವಾಗ ಪ್ರಕಾಶ ಸುಮ್ಮನಿದ್ದಾನೆಯೇ? ಅವನೂ ಅದಿರು ಕಳ್ಳ ವ್ಯವಹಾರದಲ್ಲಿ ಮುಳುಗಿ ಅಕ್ರಮ ಸಂಪತ್ತಿನ ರಾಜನಾಗತೊಡಗಿದ. ಪಳಗತೊಡಗಿದ. ಇಬ್ಬರ ಗುಡಿಸಲಂತಿದ್ದ ಮನೆಗಳು ಈಗ ಬಂಗಲೆಗಳಾದವು. ಎರಡೂ ಮನೆಗಳ ಮುಂದೆ ನಾಲ್ಕು ನಾಲ್ಕು ಅದಿರು, ಇಲ್ಲ ಮರಳು ಲಾರಿಗಳು ನಿಲ್ಲ ತೊಡಗಿದವು. ಎಲ್ಲೆಂದರಲ್ಲಿ ಇವರದೇ ಬೈಕುಗಳ ಸದ್ದು. ಇವರೂ ಹಾಕಿದ ಎಂಜಲಿಗೆ ಬಾಯ್ಬಿಡುವ ಬೋಪರಾಕ್ ಹಲ್ಲು ಕಿಸುಕ ಖದೀಮರು ಹುಟ್ಟಿಕೊಂಡರು. ಒಂದು ರೀತಿಯಲ್ಲಿಗ ನಿಧಾನ ವಾಗಿ ಎರಡು ಗುಂಪುಗಳು ಹುಟ್ಟಿಕೊಂಡವು. ರಾಜಕೀಯ ಜಗತ್ತು ಇಬ್ಬರನ್ನೂ ಆಕರ್ಷಿಸ ತೊಡಗಿತು. ಸ್ನೇಹವೇನೋ ಅಲ್ಪ ಸ್ವಲ್ಪ ಇತ್ತು. ಮಹೇಂದ್ರ ಆಗಾಗ ಪ್ರಕಾಶನ ಮನೆಗೆ ಬರುತ್ತಲೂ, ಹೋಗುತ್ತಲೂ ಇದ್ದ. ಅದು ಪ್ರಕಾಶನಿಗೆ ಗೊತ್ತಿಲ್ಲದ ಇನ್ನೊಂದು ಆಕರ್ಷಣೆ. ಪ್ರಕಾಶನ ತಂಗಿಯೊಬ್ಬಳು ಗಂಡನನ್ನು ಬಿಟ್ಟು ಬಂದು ವರ್ಷಗಳಾಗಿತ್ತು. ಹಣದ ಹರಿವು ಹೆಚ್ಚಾಗುತ್ತಿದ್ದಂತೆ ಪ್ರಕಾಶ ಮನೆ ಸಮೀಪವೇ ಒಂದು ಸಣ್ಣ ಮನೆಯನ್ನು ಆಕೆಗೆ ಕಟ್ಟಿಸಿಕೊಟ್ಟಿದ್ದ. ಆಕೆಗೂ ವಿಚ್ಛೇದನದ ಹಣವೂ ಸ್ವಲ್ಪ ಬಂದಿದ್ದು ಆರಾಮಾಗೆ ಇದ್ದಳು. ಪ್ರಕಾಶನ ಮನೆಗೆ ಹೋಗಿ ಬಂದು ಮಾಡುತ್ತಿದ್ದ ಮಹೇಂದ್ರ ಮತ್ತವಳ ಮಧ್ಯೆ ಅದು ಹೇಗೋ ಒಂದು ಬಂಧ ಏರ್ಪಟ್ಟಿದ್ದು, ವಿಷಯ ಎಲ್ಲಾ ಕಡೆಯಲ್ಲೂ ಹರಿದಾಡ ತೊಡಗಿದರೂ ಪ್ರಕಾಶನಿಗೆ ಮಾತ್ರ ತಿಳಿದಿರಲಿಲ್ಲ. ಅದರಿಂದಾಗುವ ಅನಾಹುತದ ಲೆಕ್ಕ ಬಹುಶಃ ಅಂದಾಜು ಯಾರಿಗೂ ಇರಲಿಲ್ಲ. ಮದುವೆಯಾಗದ ಪ್ರಕಾಶ ಹೆಣ್ಣಿನ ವಿಷಯದಲ್ಲಿ ಹಲ್ಲುಗಿಂಜುವವನಾಗಿರಲಿಲ್ಲ. ಒಳ್ಳೆಯ ಹುಡುಗಿ ತಲಾಷಿಲಿದ್ದ.

ಇಂವ ಕಲಿದೇ ಇದ್ರು, ಆಸ್ತಿ ನೋಡೆ ಹಿಣ್ಣ ಕುಡ್ತರ ತಾಯಿ ಆಗಾಗ ಜಂಬಕೊಚ್ಚಿಕೊಳ್ಳುತ್ತಿದ್ದರು. ಇದ್ದಾಗ ಇರುವುದಕ್ಕಿಂತ ಹೆಚ್ಚಾಗಿ ತೋರಿಸಿಕೊಳ್ಳುವುದು, ಜಬದ್ರಸ್ತ ಬದುಕಿನ ಬಡಾಯಿ ಆ ಜನರ ಬದುಕಿನ ಬಡಿವಾಣ.

ಏ ಮಹೀ, ನೀ ಪದೇ ಪದೇ ಮಾನಿ ಕಡೆ ಬರಬ್ಯಾಡ. ಅಣ್ಣ ಯೇಗೇಗ ಬಾಳ ಸಿಟ್ಟ, ಸಿಟ್ಟ ಮಾಡ್ಯ. ನಮ್ಮ ವಿಷ್ಯ ಏನಾದ್ರು ಗೊತ್ತಾದ್ರೇ.. ಏನಾತಿದೇನಾ?. ಕಾಮಾಕ್ಷಿ ಆ ದಿನ ಮಹೇಂದ್ರ ನಿಗೆ ನಾಜೂಕಾಗೇ ಸುದ್ದಿ ಮುಟ್ಟಿಸಿದಳು. ನಿಮ್ಮ ಅಣ್ಣ ಏನ ಬಲರಾಮ, ಹಾಂಗೇನರೂ ಅಂವಗೆ ಗುತ್ತಾದ್ರೆ, ಏನ ಮಾಡ್ಯ ನೋಡೆ ಬಿಡ್ತಿ.ನಿಂಗೂ ಉಂದ ಮಂಗಲಸೂತ್ರ ಕಟ್ಟೆಬಿಡ್ತಿ. ನೋಡೆ ಬಿಡ್ವ.ಎಂದಾಕೆಗೆ ಮರಳು ಮಾತನಾಡಿ ಪುಸಲಾಯಿಸಿದ.

ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ. ಹೆಣ್ಣು ಕೊಟ್ಟ ಮಾವ ಸಮಾಜದಲ್ಲಿ ಆಸ್ತಿವಂತನಾ ಗಿದ್ದು ಮಹೇಂದ್ರನ ಮೇಲೆ ಹಿಡಿತ ಚೆನ್ನಾಗಿಯೇ ಇಟ್ಟುಕೊಂಡಿದ್ದ. ಮೊದಲೆ ಊಸರವಳ್ಳಿಯ ಸೋಗಿನ ಮಹೇಂದ್ರನ ನಿಜವಾದ ಬಣ್ಣ ಆಕೆಗಂತೂ ತಿಳಿದಿರಲಿಲ್ಲ. ಮಹೇಂದ್ರನ ಮದುವೆ ಯಾಗಿ ಆಗಲೇ ನಾಲ್ಕು ವರ್ಷಗಳಾಗಿತ್ತು. ಒಂದು ಮಗುವು ಆಗಿ ಹೆಂಡತಿ ಯಾವಾಗಲೂ ಮಗುವಿನ ಆರೈಕೆಯಲ್ಲೆ ಉಳಿಯುತ್ತಿದ್ದದ್ದು, ಮಹೇಂದ್ರನಿಗೆ ಇನ್ನೊಂದು ಬಯಕೆಗೆ ಬೆದೆ ಬಂದಿತ್ತು. ಇತ್ತ ಇದು ಕೂಡ ಕೈತಪ್ಪಿದರೆ ಎನ್ನುವ ಚಿಂತೆಯಲ್ಲಿ ಗೆಳೆಯ ಪ್ರಕಾಶ ಈಗೀಗ ವೈರಿಯಾಗಿ ಕಾಣಿಸತೊಡಗಿದ. ಆದರೆ ಹಂಚಿಕೊಂಡ ಗಂಟಿನ ಗುಟ್ಟು ಮಾತ್ರ ಕಗ್ಗಂಟಿನ ಕೆಂಡವಾಗಿ ಎದೆಯೊಳಗೆ ಉಳಿಸಿಕೊಳ್ಳಲು ಆಗದೇ ಹೊರಹಾಕಲು ಆಗದೇ ಇಬ್ಬರನ್ನೂ ಕಾಡ ತೊಡಗಿತ್ತು. ಯಾರಾದರೂ ಒಬ್ಬರು ಮೇಲೆ ಹೋದರೆ ಮಾತ್ರ ಈ ಸಮಸ್ಯೆಗೆ ಪರಿಹಾರ ಎಂಬುದು ಇಬ್ಬರ ಮನದಲ್ಲೂ ಹೊಂಚುಹಾಕುತ್ತಿತ್ತು.

ಜುಲೈ ತಿಂಗಳಲ್ಲಿ ಸರಿಯಾಗಿ ಗ್ರಾಮ ಪಂಚಾಯತ ಚುನಾವಣೆಯೂ ಘೋಷಣೆಯಾಗಿ ಬಿಟ್ಟಿತು. ಪ್ರಕಾಶನ ಕಡೆ ಜನ ಅವನನ್ನು ಹುರಿದುಂಬಿಸಿ ಹಿರಿಯೂರು ಗ್ರಾಮಪಂಚಾಯತಿಗೆ ಕೆರೆಕೊಪ್ಪದಿಂದ ಹಿಂದುಳಿದ ಅಭ್ಯರ್ಥಿ ಸ್ಥಾನಕ್ಕೆ ನಾಮಪತ್ರ ಸಲ್ಲಿಸುವಂತೆ ಮಾಡಿದರು. ಇದು ಮಹೇಂದ್ರನಿಗೆ ಸಹನೆಯಾಗಲಿಲ್ಲ.

ಗೆಳೆಯರೊಡನೆ ಚರ್ಚಿಸಿದ ಇಂವ್‌ಯಾಕೆ ಇಲೆಕ್ಷನೆ ನಿಲ್ಲಬೇಕಾಗತ, ನಾ ನಿಲ್ತಿ ಅಂದ ಗುತ್ತಿದ್ರು ಹಿಂಗ ಮಾಡ್ಯ. ಮಾನಗೆಟ್ಟಂವ. ಇಂತೋರಿಗೆಲ್ಲ ಯಾವ ಹೆಲ್ಪು ಮಾಡುಕಿಲ್ಲ.ಖದೀಮರ್ರ. ಎನ್ನುತ್ತಲೇ ಗೆಳೆಯರೆಲ್ಲ ನೀನು ನಿಂತೆ ಬಿಡ, ನೋಡೆ ಬಿಡ್ವ ಉಂದ ಕೈಯ, ಆಂವಗೂ ಬಗೀಲೆ ಬುದ್ದಿ ಬರ್ಲೆ ಎಂದು ಹುರಿದುಂಬಿಸಿದರು.

ಮೊದಲೇ ತಾನೇ ಅಧ್ಯಕ್ಷನಾಗುವ ಕನಸು ಕಾಣುತ್ತಿದ್ದ ಮಹೇಂದ್ರ, ಯೋಚಿಸಲೇ ಇಲ್ಲ, ಮರುದಿನ ಅವನ ನಾಮಪತ್ರವು ಸಲ್ಲಿಕೆಯಾಗಿ ಪಕ್ಕದ ಊರು ಮಾಯಕೆರೆಯಿಂದ ಸಾಮಾನ್ಯ ಅಭ್ಯರ್ಥಿ ಸ್ಥಾನಕ್ಕೆ ಸ್ಪರ್ಧಿಯಾಗಿ ನಿಂತೆ ಬಿಟ್ಟ. ಸ್ನೇಹದ ಜಾಗವನ್ನು ಈಗ ಪೂರ್ತಿಯಾಗಿ ದ್ವೇಷ ಆಕ್ರಮಿಸಿಕೊಳ್ಳತೊಡಗಿತು. ಆದರೂ ಇಬ್ಬರೂ ತಾವುಗಳು ಹೇಗೆ ದಿಢೀರ ಶ್ರೀಮಂತರಾದ ವಿಚಾರವನ್ನು ಯಾರ ಹತ್ತಿರವೂ ಬಾಯಿ ಬಿಡಲಿಲ್ಲ. ಬಾಯಿ ತುಂಬಾ ಕುಡಿದ ದಿನ ಕೂಡ. ಒಳಗೊಳಗೆ ಕುದಿಯುವ ಆ ಸತ್ಯವನ್ನು ಪ್ರಯತ್ನ ಪೂರ್ವಕವಾಗೆ ತಡೆದುಕೊಳ್ಳುತ್ತಿದ್ದರು. ಉಳಿದಂತೆ ಇತರ ವಾಗ್ವಾದಗಳು ನಿರಂತರವಾಗಿದ್ದವು.

ಹಳೆಯ ತಲೆಗಳು ತೋಚಿದಂತೆ ಲೆಕ್ಕಾಚಾರ ಹಾಕಿದರೂ ಇವರಿಬ್ಬರ ಆಸ್ತಿಯ ಅಂದಾಜು, ಅದನ್ನು ಗಳಿಸಿದ ಬಗೆ ಮಾತ್ರ ಅರ್ಥವಾಗುವಂತಿರಲಿಲ್ಲ. ಪ್ರಭಾವಿ ರಾಜಕಾರಣಿಯೊಬ್ಬರ ಚಮಚಾದಂತೆ ಕೆಲಸ ಮಾಡುತ್ತಿದ್ದ ಮಹೇಂದ್ರಗೆ ಅವರ ಕೃಪಾಕಟಾಕ್ಷವಂತೂ ಇದ್ದೆ ಇತ್ತು. ಅದೊಂದು ದಿನ ಎಲೆಕ್ಷನ್ ಪ್ರಚಾರಕ್ಕೆಂತಲೆ ಮಹೇಂದ್ರ ಹೊಸ ಜೀಪೊಂದನ್ನು ಖರೀದಿಸಿದ. ಪ್ರಚಾರಕ್ಕೆ ಕಾವು ಏರತೊಡಗಿತ್ತು. ಪ್ರಕಾಶ ತನ್ನ ಬೆಂಬಲಿಗರೊಂದಿಗೆ ರಸ್ತೆ ಪಕ್ಕ ಚುನಾವಣೆಗೆ ಸಂಬಂಧಿಸಿ ಅದು ಇದು ಮಾತನಾಡುತ್ತಿರುವಾಗಲೇ ಹೊಸ ಜೀಪಿನಲ್ಲಿ ಬಂದ ಮಹೇಂದ್ರ, ಭರ್ರನೇ ಬ್ರೇಕು ಒತ್ತುತ್ತಲೂ ಎದ್ದ ಧೂಳು ಅಲ್ಲಿದ್ದವರ ಬಾಯಿ ಮೂಗಿನೊಳಗೆಲ್ಲ ಸೇರಿ ಒಂದೇ ಸಮ ಸೀನತೊಡಗಿದರು. ಕಣ್ಣುಗಳನ್ನು ಉಜ್ಜಿಕೊಳ್ಳಲು ಆಗದೇ ಬಿಡಲು ಆಗದೇ ಒದ್ದಾಡುತ್ತ ಇದ್ದರೂ ಪ್ರಕಾಶನ ಪಿತ್ತ ನೆತ್ತಿಗೇರಿತ್ತು. ಅರ್ಭಟಿಸುತ್ತ ಜೀಪಿನಿಂದಿಳಿದ ಮಹೇಂದ್ರನ ಕೊರಳ ಪಟ್ಟಿಗೆ ಕೈಹಾಕಿ,

ಏನೋ, ಮಗನೇ? ಕಳ್ಳ ದುಡ್ಡು ಸಿಕ್ಕದಕ್ಕೆ ಇಟ್ಟೆಲ್ಲಾ ಮಿರಿತಿ. ನಿನ್ನ ಬಂಡವಾಳ ಎಲ್ಲಾ ನಂಗ ಗುತ್ತಿದ್ದು, ನಾನ್ ಮುಂದೆ ನಿಂದ ಈ ಹಾರಾಟ ಆದ್ರೆ ಅದ್ರ ಹೇಂಗೆ ಹೇರ್ಗೆ ಹಾಕ್ಬೇಕ ಅನ್ನುದ ನಾಂಗು ಗುತ್ತಿದ. ಬೇವರ್ಸಿ, ಜನ ನಿಂತದ್ದ ಕಣ್ಣಿಗ ಕಾಣ್ತಿದಾ ಇಲ್ಲಾ. ನಿಂಕಡೊಬ್ಬನ್ನಕಡೆ ಜೀಪಿದಂದ ಮಾಡ್ಯಾ? ಹಲ್ಕಾ ನನ್ನ ಮಗನೇ,ಎನ್ನುತ್ತ ಏರಿಹೋಗಲು ಮಹೇಂದ್ರ ಕೆಂಡಾ ಮಂಡಲವಾದ.

ಕಾಲರ್ ಪಟ್ಟಿ ಸರಿಮಾಡಿಕೊಳ್ಳುತ್ತ ಬಡಬಡಿಸ ತೊಡಗಿದ. ನೀನೇನೋ ಮಹಾ ಸಾಚಾ, ನಿನ್ನ ಹಕೀಕತ್ತ ನಾಂಗುತ್ತಿಲ್ಲ. ಅವ್ವಿ, ಅಪ್ಪ ಎಲ್ಲಾ ಉಂದೇ ಜಾತ್ಯವ. ಮಾನ ಮರ್ಯಾದೆ ಬಿಟ್ಟವ. ಯೇಗೆ ನಿಂಗೂ ಬಡ್ಕಂಡಿದ ದಿವ್ವ. ಉಂದ ಕಾಲಕ್ಕೆ ದೋಸ್ತ ಅಂದ ಬಿಟ್ಟಿ. ಇಲ್ಲಾಂದ್ರ ಹುಟ್ಟಲಾ ಅನ್ನ ಬಿಡ್ತದೆ. ಎಂದೆನ್ನುತ್ತಾ ಮುಂದೆ ಮುಂದೆ ಕೈ ಕೈ ಮಿಲಾಯಿಸುವತ್ತ ಮುಂದುವರೆದರು. ಅಷ್ಟರಲ್ಲೆ ಆ ಕಡೆಯವರೂ ಈ ಕಡೆಯ ವರೂ ಎಲ್ಲಾ ಸೇರಲು ದೊಡ್ಡ ರಾದ್ಧಾಂತವೇ ಆಗಿ ಹೋಯಿತು.ಎಳೆಯ ಸ್ಪರ್ಧೆ ಈಗ ದ್ವೇಷದ ಹುತ್ತವಾಗಿ ಬೆಳೆಯಿತು. ಆಪ್ತರು ಬದ್ಧ ವೈರಿಗಳಾದರು. ಹಣದ ಮಹಿಮೆ ಮುಂದೆ ಎಲ್ಲ ಗೌಣ. ಕಾಲದ ಕುದುರೆಯ ವೇಗಕ್ಕೆ ಎಲ್ಲವೂ ಬದಲಾಗುವುದು ಸೃಷ್ಟಿ ನಿಯಮ.

ನಾಳೆಯೆ ಚುನಾವಣೆ, ಹಿಂದಿನ ದಿನ ಚಿತ್ರ ವಿಚಿತ್ರ ರಾಜಕೀಯ ದೊಂಬರಾಟ. ಹಿರಿಯೂರು ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಮುಖಂಡರ ಖರೀದಿ, ಹಣದ ಹಂಚುವಿಕೆ, ಸೀರೆಗಳ ಕೊಡುಗೆ, ಮದಿರೆಯ ಪಾಕೀಟುಗಳು ಎಲ್ಲವೂ ಯಥೇಚ್ಛವಾಗಿ ಸರಬರಾಜಾದವು. ಕೆರೆಕೊಪ್ಪ, ಮಾಯಕೆರೆ ಪರಸ್ಪರ ಸ್ಪರ್ಧೆಗಿಟ್ಟಂತೆ ಇವೆಲ್ಲವನ್ನು ಹಂಚಿದ್ದವು. ಮಾರನೇ ದಿನ ಬೆಳ್ಳಂಬೆಳಿಗ್ಗೆ ತನ್ನ ವೋಟು ಚಲಾಯಿಸಿ ಕಾಯಿದೆ ಮೀರದೆ ದೂರದಲ್ಲಿ ಬೆಂಬಲಿಗರ ಜೊತೆಯಲ್ಲಿ ಮಹೇಂದ್ರ ಕಾರಿನಲ್ಲಿ ಕೂತು ಮತಚಲಾವಣೆ ಲೆಕ್ಕಾಚಾರ ಹಾಕುತ್ತಿದ್ದ. ತಮಗೆ ಬೇಕಾದ ಕೆಲವರನ್ನು ಕೆಲವೊಮ್ಮೆ ತನ್ನದೇ ಕಾರಲ್ಲಿ ಕರೆದು ತರುವುದು, ಮನೆ ಮುಟ್ಟಿಸಿಬರುವುದು ನಡೆದೆ ಇತ್ತು. ಹೆಂಗೋ ಏನೋ ವಯಸ್ಸಲ್ಲಿ ಹಿರಿಯನಾದ್ರೂ ಮನಸ್ಸು ಮಾತ್ರ ಹೆಸರಿಗೆ ತಕ್ಕಂತೆ ಇದ್ದ ಕರಿಯಣ್ಣ ತನ್ನ ವೋಟು ಕೆರೆಕೊಪ್ಪದಲ್ಲಿ ಚಲಾಯಿಸಿ ಇಲ್ಲಿಯ ಸಮಾಚಾರ ನೋಡುವ ಸಲುವಾಗಿ ಎರಡು ಕಿ.ಮೀ. ಕ್ರಮಿಸಿ ಮಾಯಕೆರೆಯವರೆಗೆ ವಾಲುತ್ತ ವಾಲುತ್ತ ಇವನತ್ತಲೇ ನಡೆದು ಬಂದ. ಮೊದಲೆ ಆತನ ದೃಷ್ಟಿಯೂ ಕೆಟ್ಟ ಹೆಸರು ಪಡೆದ ದೃಷ್ಟಾಂತ ಇರೋದ್ರಿಂದ ಮಹೇಂದ್ರ, ಆತ ಹತ್ತಿರ ಬರುತ್ತಲೇ ಬೇರೆ ಕಡೆ ದೃಷ್ಟಿ ಹರಿಸಿದಂತೆ ನಟಿಸಿದರೂ ಆತ ಬಿಡಲಿಲ್ಲ. ಮಹೇಂದ್ರ, ಅಡ್ಡಿಲ್ಲ. ಜೋರೆ ನಡಿತೀದ. ಎಂಥೆಂಥ್ರವರೆಲ್ಲಾ ಏನೆನೋ ಆಗೋ ಕಾಲ, ಕಾಚ ಪಾಚ ಆಯ್ತ.ಪಾಚ ಕಾಚ ಆಯ್ತು. ನಡೀಲೆ ನಡೀಲೆ. ಹೀ.ಹೀ. ಎಂದರೂ ಒಳಗಿನ ಮತ್ಸರವನ್ನು ಚೂರು ಹೊರಹಾಕೆ ಹೋದ. ಒಮ್ಮೆಲೆ ಮಹೇಂದ್ರನಿಗೆ ತಲೆ ಕೆಟ್ಟಂಗಾಯ್ತು. ಯಾಕೋ ಎಲೆಕ್ಷನ್ನಿಗೆ ನಿಂತ ಮೇಲೆ ಒಂದಲ್ಲಾ ಒಂದು ಮಾನಸಿಕ ಕಿರಿಕಿರಿಯಾಗುತ್ತಲೇ ಇತ್ತು. ಆದರೂ ತಲೆಕೊಡವಿ ಭಾರ ಇಳಿಸಿಕೊಳ್ಳಲು ಲಕ್ಷ್ಯ ಬೇರೆಡೆ ಹರಿಸಿದ.

ಇತ್ತ ಪ್ರಕಾಶನಿಗೆ ಕೆರೆಕೊಪ್ಪ ಗ್ರಾಮದಲ್ಲಿ ಯಾವ ಕಿರಿಕಿರಿಯಾಗದೆ ಇದ್ದೂ ಪ್ರತಿಸ್ಪರ್ಧಿ ಸುಬ್ರಾಯ ಮಾತ್ರ ಸೊಕ್ಕು ತೋರಿಸುತ್ತಿದ್ದಂತೆ ಕಾಣಿಸುತ್ತಿತ್ತು. ಹಾಗೂ ಹೀಗೂ ಐದುವರೆವರೆಗೂ ಮತ ಚಲಾವಣೆಗೊಂಡು ಮತಗಟ್ಟೆ ಅಧಿಕಾರಿಗಳು ಎಲ್ಲವನ್ನು ಕಟ್ಟಿಕೊಂಡು ಹೋಗುವವರೆಗೂ ಅಲ್ಲೇ ನಿರೀಕ್ಷಿಸಿ ಆಮೇಲೆ ಪ್ರಕಾಶ ಕೆರೆಕೊಪ್ಪದ ಮತಗಟ್ಟೆ ಬಿಟ್ರೆ, ಮಹೇಂದ್ರ ಮಾಯಕೆರೆಯ ಮತಗಟ್ಟೆ ಬಿಟ್ಟು ಮನೆಗೆ ನಡೆದರು. ಇನ್ನೈದು ದಿನದಲ್ಲಿ ಮತ ಎಣಿಕೆ. ಈ ಮಧ್ಯೆ ಒಬ್ಬರೊಬ್ಬರ ಮೇಲೆ ಗೂಬೆ ಕೂರಿಸುವುದು. ಕಂಡಾಗ ಸಿಡುಕಿಂದ ಮುಖತಿರುವಿ ನಡೆಯುವುದು ನಡೆದೆ ಇತ್ತು. ಮತ ಎಣಿಕೆಯಾಗಿ ಮಹೇಂದ್ರ ಭರ್ಜರಿ ಬಹುಮತ ಬಾರಿಸಿ ಗೆದ್ದು ಬಂದರೆ, ಪ್ರಕಾಶ ಮಾತ್ರ ಎಪ್ಪತ್ತೈದು ವೋಟುಗಳ ಅಂತರದಲ್ಲಿ ಪರಾಭವಗೊಂಡಿದ್ದ. ಸುಬ್ರಾಯ ಆರಿಸಿ ಬಂದಿದ್ದ. ಅವನಿಗೆ ಮಹೇಂದ್ರನ ಕುಮ್ಮಕ್ಕು ಸಿಕ್ಕಿತ್ತೆನ್ನುವುದು ತಿಳಿದ ಮೇಲಂತೂ ಪ್ರಕಾಶ ನಿಗಿ ಕೆಂಡವಾದ. ಮಹೇಂದ್ರನ ಗೆಲುವಿಗೆ ಪ್ರಭಾವಿ ರಾಜಕಾರಣಿಯ ಬೆಂಬಲವೇ ಕಾರಣ ಎಂದು ಜನರಾಡಿಕೊಳ್ಳುತ್ತಿದ್ದರು. ಮೊದಲೇ ಕೆಟ್ಟಬಾಯಿ ಕೆಟ್ಟಕಣ್ಣಿನ ಕರಿಯಣ್ಣ ಒಳಗೊಳಗೆ ಉರಿದಿದ್ದ. ಕಳೆದ ಎಲೆಕ್ಷನ್‌ನಲ್ಲಿ ಅವನ ಮಗ ಪೂರ್ತಿಯಾಗಿ ಸೋತುಹೋಗಿದ್ದು, ಇದ್ದದ್ದನ್ನು ಕಳೆದು ಕೊಂಡು ಈಗ ರೈತಾಪಿ ಮಾಡಿಕೊಂಡು ಸ್ವಲ್ಪ ಮಟ್ಟಿಗೆ ಸಮಾಧಾನದ ಉಸಿರಾಡುತ್ತಿದ್ದದ್ದು, ನೆನೆದಾಗ ಮಹೇಂದ್ರನ ಗೆಲುವು ಗಾಯದ ಮೇಲೆ ಬರೆ ಎಳೆದಂತೆ ನೋವು ಕೊಟ್ಟಿತ್ತು.

ಇಂವ ಗೆದ್ದ ಬಂದ ಮಾಡು ಹರ್ದೇನ ಅಟ್ರಲ್ಟೇ ಇದ. ಮಾಡದ್ದೆಲ್ಲಾ ಮನೆಹಾಳ ಕೆಲಸನೇ, ಇಂತೋರಿಗೆ ಏಗೆ ಕಾಲ, ಎಲ್ಲಾ ಕಾಲದ ಮಹಿಮೆಎನ್ನುತ್ತ ಊರೆಲ್ಲಾ ಸುತ್ತಿದ. ಒಟ್ಟಾರೆ ಕೆರೆ ಕೊಪ್ಪದ ಬಹಳಷ್ಟು ಜನರಿಗೆ ಅವನ ಗೆಲುವು ಸಂತಸಕೊಡಲಿಲ್ಲ.ಯಾವುದೊಂದು ಒಳ್ಳೆಯ ಇತಿಹಾಸ ಹೊಂದಿಲ್ಲದ ಆತ ಅಧಿಕಾಕ್ಕೆ ಬಂದರೆ ಮುಂದೇನು? ಎಂಬ ಸಂಶಯವಿತ್ತು.

ಯಾರು ಏನೇ ಬಯಸಿದರೂ ಮಹೇಂದ್ರನ ಜೊತೆ ಮಾತ್ರ ಕಾಲದ ಕುದುರೆ ಜೋರಾಗಿಯೇ ಓಡುತ್ತಿತ್ತು. ಹಿರಿಯೂರ ವ್ಯಾಪ್ತಿಯ ಎಂಟು ಕ್ಷೇತ್ರಗಳಲ್ಲಿ ಆರಿಸಿ ಬಂದವರೆಲ್ಲಾ ಬಹುತೇಕರು ಅನನುಭವಿಗಳು. ಅನಕ್ಷರಸ್ಥರು ಆಗಿದ್ದರು. ಅಷ್ಟೇ ಅಲ್ಲದೇ ಅಧ್ಯಕ್ಷ ಪಟ್ಟ ಕೂಡ ಹಿಂದುಳಿದ ವರ್ಗಕ್ಕೆ ಸೀಮಿತವಾಗಲು, ಸಾಮಾನ್ಯ ಸ್ಥಾನದಿಂದ ಗೆದ್ದ ಹಿಂದುಳಿದ ವರ್ಗದ ಮಹೇಂದ್ರನಿಗೆ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆ ಅವಕಾಶಗಳು ಅರಿಸಿಕೊಂಡು ಬಂದವು. ಒಟ್ಟು ಎಂಟು ಸ್ಥಾನಗಳಲ್ಲಿ ಈಗಾಗಲೇ ಮೂರು ಜನರನ್ನು ತನ್ನ ಪರವಾಗಿ ಮಾಡಿಕೊಂಡ ಮಹೇಂದ್ರ ಇನ್ನೆರಡು ಮತಗಳ ಭೇಟೆಯಲ್ಲಿದ್ದ. ಅದಕ್ಕಾಗಿ ಅಧ್ಯಕ್ಷ ಸ್ಥಾನದ ಆಯ್ಕೆ ಹಿಂದಿನ ದಿನ ಊರ ಹೊರಗಿನ ಮಂಕಾಳಮ್ಮನ ಗುಡಿಯಲ್ಲಿ ರಹಸ್ಯ ಚಿಂತನೆಗಳು ನಡೆದವು. ರಾತ್ರಿಯಂತೂ ಒಂದು ಹಗರಣಕ್ಕೆ ಬೇಕಾದ ಎಲ್ಲಾ ಮಸಲತ್ತುಗಳು ಲಾಟೀನು ಬೆಳಕಿನಲ್ಲಿ ನಡೆದು ಎರಡು ಮತಗಳು ತಲಾ ಐವತ್ತು ಸಾವಿರಕ್ಕೆ ಖರೀದಿಯಾದವು. ಈಗಿಲ್ಲಿ ಪಕ್ಷಗಳ ಪ್ರತಿಷ್ಠೆಯೂ ಸೇರಿಕೊಂಡಿದ್ದರಿಂದ ಯಾವ ಅಡೆತಡೆಯಿಲ್ಲದೆ ಹಣದ ವ್ಯವಹಾರ ಕುದುರಿತ್ತು.

ಕಗ್ಗತ್ತಲೆಯ ರಾತ್ರಿ ಹನ್ನೊಂದು ಗಂಟೆ. ದೇಗುಲದ ಜಗುಲಿ ಮೇಲೆ ಮೆಲ್ಲನೆ ಉರಿಯುತ್ತದ್ದ ಲಾಟೀನು. ಎಣ್ಣೆ ತೀರುತ್ತ ಬಂದಿದ್ದರಿಂದಲೋ, ಬತ್ತಿಯ ಆಯಸ್ಸು ಮುಗಿಯುತ್ತ ಬಂದಿತ್ತೋ, ಉರಿ ಕ್ರಮೇಣ ಕಡಿಮೆಯಾಗುತ್ತಾ ಬಂದಿತ್ತು. ಮಹೇಂದ್ರನೇ ದೇವರಿಗೆ ಊದುಬತ್ತಿ ಬೆಳಗಿಸಿ ವ್ಯವಹಾರ ಮುಗಿಸಿ ಮಾತು ಪ್ರಾರಂಭಿಸಿದ.

ಸೋಮ, ಭುಜಂಗ, ಮತ್ತೆಲ್ಲಾ ಸರ್ಯಾಗಿದ ಇಲ್ಲಾ ನೊಡ್ಕಂಡ್ರಾ. ನಾಳಗ ಇಟ್ಹೊತ್ತಿಗ ಮಂಕಾಳಮ್ಮ ಆಶೀರ್ವಾದ ನಮಗೇ ಆಗಿರಬೇಕ. ನಿಮ್ಮದೆಲ್ಲ ಸರ್ಯಾಗೆ ವೋಟ ಬೀಳಬೇಕ. ಮತ್ತೆ ಹೇಳುದಿಲ್ಲ. ಮಂಕಾಳಮ್ಮನ ಮೇಲೆ ಆಣೆ ಅಂದ್ರೆ ಅಟ್ ಹಗುರಲ್ಲ. ಎಂದು ಎಚ್ಚರಿಸುತ್ತಲೂ ಗೆಳೆಯನೊಬ್ಬ ಜೋಡಿ ತೆಂಗಿನಕಾಯಿ ತಂದು ಅವರಿಬ್ಬರ ಮುಂದಿಟ್ಟ. ಅವರಿಬ್ಬರೂ ಒಮ್ಮೆ ದುಡ್ಡಿನ ಕಡೆಯೂ ಇನ್ನೊಮ್ಮೆ ತೆಂಗಿನ ಕಾಯಿ ಕಡೆಯೂ ತಿರುತಿರುಗಿ ನೋಡಿ ಕೊನೆಗೂ ಮಂಕಾಳಮ್ಮನ ಹೆಸರಿನಲ್ಲಿ ಆಣೆ ಮಾಡೇಬಿಟ್ಟರು. ಮಹೇಂದ್ರ ಈಗ ಸಮಾಧಾನಗೊಂಡ. ಹಿಡಿದ ಕೆಲಸ ಮುಕ್ಕಾಲು ಮುಗಿಯಿತೆಂದು ಕೊಂಡ. ಎಲ್ಲರೂ ಮನೆಕಡೆ ಹೊರಡಲು ಮಹೇಂದ್ರನಿಗೆ ಮಾತ್ರ ನಿದ್ದೆ ಬರಲಿಲ್ಲ. ಕಾಮಾಕ್ಷಿ ಕಾಡತೊಡಗಿದಳು. ಸಣ್ಣಗೆ ಜಿಟಿಜಿಟಿ ಮಳೆಯೂ ಸೇರಿಕೊಂಡು ಆತನ ಅಮಲು ಇನ್ನೂ ಹೆಚ್ಚಾಗಿತ್ತು. ನಿಧಾನವಾಗಿ ಮಹೇಂದ್ರನ ಜೀಪು ರಾತ್ರಿ ಹನ್ನೆರಡರ ಹೊತ್ತಿಗೆ ನಿಧಾನವಾಗಿ ಕಾಮಾಕ್ಷಿಯ ಮನೆಕಡೆ ಹೊರಟಿತು.

ತಾನಂದುಕೊಂಡ ವಿದ್ಯಮಾನಗಳೆಲ್ಲ ತಲೆಕೆಳಗಾಗಿದ್ದರಿಂದ, ಕೈಹಾಕಿದ ಕೆಲಸಗಳಲ್ಲೆಲ್ಲಾ ವಿಧಿ ತನ್ನೊಡನೆ ಆಟವಾಡುತ್ತಿರುವಂತೆ ಅನ್ನಿಸಿದ್ದರಿಂದಲೋ, ಮಹೇಂದ್ರನಿಗೆ ಉಚ್ಛ್ರಾಯ ಕಾಲ ಬಂದೊದಗಿ ಹಂತ ಹಂತವಾಗಿ ಮೇಲೇರುತ್ತಿದ್ದುದನ್ನು ನೋಡಿ ಮೈಉರಿ ಎದ್ದಂಗಾಗಿ ಪ್ರಕಾನಿಗೆ ನಿದ್ದೆ ಬರಲಿಲ್ಲ, ಮನೆ ಹೊರಗೆ ಬಂದು ಚಿಟ್ಟೆ ಮೇಲೆ ಕೂತು ಹೊರಗೆ ನೋಡುತ್ತಿದ್ದವ ತಂಗಿಯ ಮನೆ ಸಮೀಪ ಜೀಪು ಬರುತ್ತಿರು ವುದನ್ನು ನೋಡುತ್ತಾ ಜಾಗ್ರತನಾದ. ಮನಸ್ಸಿನ ಮೂಲೆ ಯಲ್ಲಿ ಅಡ್ಡ ವಾಸನೆ ಹೊಳೆದಂತಾಗಿ, ಅಲ್ಲೆ ಮನೆ ಮುಂದಿನ ಹೂಗಿಡಗಳ ಮರೆಗೆ ನಿಂತ.

ಜೀಪಿನಿಂದಿಳಿದ ಮಹೇಂದ್ರ, ಬಹಳ ನಿಧಾನವಾಗಿ ಎಲ್ಲಾ ಕಡೆ ಒಮ್ಮೆ ಕಳ್ಳ ನೋಟ ಬೀರಿ ಕಾಮಾಕ್ಷಿ ಮನೆ ಒಳಗೆ ಲಗುಬಗೆಯಿಂದ ನಡೆದ. ಮೊದಲೆ ಪೋನಾಯಿಸಿದ್ದರಿಂದ ಆಕೆ ದೀಪ ವಾರಿಸಿ ಬಾಗಿಲು ತೆರೆದು ಇಟ್ಟಿರುವಂತೆ ಕಾಣುತ್ತಿತ್ತು. ಈಗ ಪ್ರಕಾಶನಿಗೆ ತಾನು ಪೂರ್ತಿಯಾಗಿ ನಾಶವಾದಂತೆ ಅನ್ನಿಸಿತು. ರಕ್ತಹಂಚಿಕೊಂಡು ಹುಟ್ಟಿದ ತಂಗಿ, ಆತ್ಮೀಯನೆಂದು ಕೊಂಡ ಗೆಳೆಯ, ಕೈ ಹಿಡಿಯದ ವಿಧಿ ಎಲ್ಲವೂ ತನ್ನ ವಿರುದ್ಧವೇ ಕರಾಮತ್ತು ನಡೆಸುತ್ತಿರುವುದನ್ನು ಸಹಿಸಿ ಕೊಳ್ಳದಾದ. ನಖಶಿಖಾಂತ ಕುದಿಯ ತೊಡಗಿದ. ಮನೆಯೊಳಗೆ ನಡೆದವನೆ ಮಾರುದ್ದದ ಹರಿತ ವಾದ ಕತ್ತಿಯನ್ನು ಎತ್ತಿಕೊಂಡು ಬಂದ. ಕಾಮಾ ಕ್ಷಿಯ ಮನೆ ಕಡೆ ನಡೆಯಲು ಅವರಿಬ್ಬರ ಸಲುಗೆ ಸಂಭಾಷಣೆ ಕೇಳಿಸುತ್ತಿತ್ತು. ತಂಗಿಯ ಬಗ್ಗೆ ಅಸಹ್ಯ ವೆನಿಸಿತು. ತಡಮಾಡದ ಆತ ಟಕಟಕನೆ ಬಾಗಿಲು ಬಡಿಯಲು ಒಳಗಿದ್ದ ಜೀವಗಳು ಭಯದಿಂದ ಅರೆಜೀವದಂತಾದವು. ಆದರೂ ಮಹೇಂದ್ರನಿಗೆ ಒಳಗಿರಲು ಹೇಳಿ ಭಂಡ ಧೈರ್ಯಮಾಡಿ ಬಾಗಿಲು ತೆರೆದ ಕಾಮಾಕ್ಷಿ ಬಾಯಿ ತೆರೆಯುವ ಮುನ್ನವೇ ಕೋಪೋಗ್ರನಾದ ಪ್ರಕಾಶ ಕುತ್ತಿಗೆಗೆ ಒಂದೇ ಏಟು ಕೊಟ್ಟ. ಅಲ್ಲೆ ಆಕೆ ಕುಸಿದು ಬಿದ್ದಳು. ಅಷ್ಟರಲ್ಲೇ ಗಡಿಬಿಡಿಸಿ ಓಡಿಹೋಗಲು ಬಂದ ಮಹೇಂದ್ರನ ಕಾಲಿಗೆ ಏಟು ಬಿದ್ದರೂ ಹೇಗೋ ತಪ್ಪಿಸಿಕೊಂಡು ಹೊರಗೋಡಿದ. ಜೀಪು ತರಾತುರಿಯಲ್ಲಿ ಹತ್ತಿ ಚಾಲೂ ಮಾಡಿ ಹೊರಟೇ ಬಿಟ್ಟ. ಈಗ ಯೋಚಿಸುವ ಸ್ಥಿತಿಯಲ್ಲಂತೂ ಪ್ರಕಾಶನಿರಲಿಲ್ಲ. ಬಡ ಬಡ ಮನೆ ಕಡೆ ಓಡಿ ತನ್ನ ಕಾರಿನ ಕೀ ಹಿಡಿದು ಬಂದು ಮಹೇಂದ್ರನನ್ನು ಹಿಂಬಾಲಿಸಿದ. ತಂದೆ ಯಂತೂ ಇರಲಿಲ್ಲ. ಒಳಕೋಣೆಯಲ್ಲಿ ಗಾಢ ನಿದ್ರೆಯಲ್ಲಿ ಮಲಗಿದ್ದ ತಾಯಿಗೆ ಇದಾ ವುದು ತಿಳಿಯಲೆ ಇಲ್ಲ. ತೀರ ತಲೆ ಕೆಟ್ಟಂತಾದ ಮಹೇಂದ್ರ ಜೀವ ಕೈಯಲ್ಲಿ ಹಿಡಿದು ಜೀಪು ಚಲಾಯಿಸುತ್ತಿದ್ದಂತೆ ಕಣ್ಣ ಮುಂದೆ ಬೇಡ ಬೇಡವೆಂದರೂ ಅಪಘಾತದಲ್ಲಿ ಅವರಿಂದ ಹತಳಾದ ಮಹಿಳೆಯ ಮುಖವೇ ಕಾಣತೊಡಗಿತು. ಕೆಲವೊಮ್ಮೆ ಆ ಮುಖ ದೇವಿ ಮಂಕಾಳಮ್ಮನ ಮುಖ ದಂತೆಯೂ ಮರುಕ್ಷಣ ಮಹಿಳೆಯ ಮುಖದಂತೆಯೂ ಕಾಡತೊಡಗಿದಂತಾಗಿ ಆತ ಇನ್ನಷ್ಟು ಬೆವತ. ಜೀಪು ಮನೆ ಕಡೆ ಹೋಗುವ ಬದಲು ಯಾವುದೋ ಮಾಯಕ್ಕೆ ಒಳಗಾದವನಂತೆ ರಸ್ತೆಯುದ್ದಕ್ಕೂ ವಾಹನ ಚಲಾಯಿಸುತ್ತಲೂ ಇವನ ಹಿಂದೆ ಹಿಂದೆ ಪ್ರಕಾಶನ ಕಾರು ಬರ ತೊಡಗಿತು.ಈಗ ಇನ್ನಷ್ಟು ಗಾಬರಿಗೊಂಡ. ಸರಿಯಾಗಿ ಅದೇ ತಿರುವು ದಾಟಿ ಮುಂದೆ ಬರುತ್ತಲೂ ಸೇತುವೆ ಹತ್ತಿರಕ್ಕೆ ಬಂದಂತೆ ತಲೆ ಕೆಲಸ ಮಾಡುವುದನ್ನೆ ನಿಲ್ಲಿಸಿಬಿಟ್ಟಂತೆ, ಒಮ್ಮೆಲೇ ಬ್ರೇಕು ಹಾಕಿದ ಆ ರಭಸ ಎಷ್ಟಿತೆಂದರೆ ವಾಹನದ ಮುಂದಿನ ಗಾಲಿಗಳು ಒಮ್ಮೆಲೆ ಮೇಲಾದವು. ಹಿಂದಿನಿಂದ ಬೆನ್ನಟ್ಟಿ ಬರುತ್ತಿದ್ದ ಪ್ರಕಾಶ ಈಗ ಬ್ರೇಕು ಹಾಕುದನ್ನೆ ಮರೆತ. ಜೀಪಿಗೆ ಗುದ್ದಿದ ಕಾರು ಹೊರಳಿ ಸೇತುವೆಗೆ ಗುದ್ದಿತು. ಕಾರಿನಲ್ಲಿದ್ದ ಪ್ರಕಾಶನ ಉಸಿರು ಕ್ಷಣದಲ್ಲಿ ನಿಂತಿತು. ಕಾರು ಗುದ್ದಿದ ಜೀಪು ಸೇತುವೆಯಿಂದ ಕೆಳಗೆ ಬಿದ್ದು ಪೆಟ್ರೋಲ್ ಟ್ಯಾಂಕು ಜಕಮಗೊಂಡು ಹೊರಚೆಲ್ಲಿದ ಪೆಟ್ರೋಲಿಗೆ ಭಗ್ಗನೇ ಬೆಂಕಿಯ ಕೆನ್ನಾಲಿಗೆ ಹತ್ತಿಕೊಂಡು ಮಹೇಂದ್ರನನ್ನು ಒಳಗೊಂಡು ಜೀಪು ಉರಿಯತೊಡಗಿತು.

ಹಿಂದಿನ ರಾತ್ರಿ ಊರೆಲ್ಲ ನಾಳೆಯ ರಾಜಕೀಯ ಸಮರಕ್ಕೆ ಸಿದ್ಧವಾಗಿದ್ದರೆ, ಬೆಳಗಾಗುತ್ತಲೆ ಕೆರೆಕೊಪ್ಪ ಶೋಕಸಾಗರದಲ್ಲಿ ಮುಳುಗಿತ್ತು. ತೀವ್ರವಾಗಿ ರಕ್ತಸ್ರಾವದಿಂದ ಪ್ರಜ್ಞಾಹೀನಳಾಗಿದ್ದ ಕಾಮಾಕ್ಷಿ ಆಸ್ಪತ್ರೆ ಸೇರಿದರೆ, ಇತ್ತ ಕಡೆ ಅಧ್ಯಕ್ಷ ಸ್ಥಾನಕ್ಕೆ ನಡೆಯಬೇಕಿದ್ದ ಆಯ್ಕೆ ಪ್ರಕ್ರಿಯೆ ಸ್ಥಗಿತ ಗೊಂಡಿತು. ಕರಿಯಣ್ಣ ತನ್ನದೇ ವಿಶಿಷ್ಠ ಮಾತುಗಳ ಮಳೆ ಸುರಿಸತೊಡಗಿದ. ಇದು ಅಂತಿಂತ ಸೃಷ್ಟಿಯಲ್ಲ. ಪರಶುರಾಮ ಸೃಷ್ಟಿ. ಇಲ್ಲೆಲ್ಲಾ ಬೇಕಾಬಿಟ್ಟಿ ವ್ಯವಹಾರ ನಡಿಯೂಲ. ಆದ್ರೂ ಮಕ್ಕಳ ಪಾಪ. ಇಟ್ಟ ಬ್ಯಾಗೆ ಹಿಂಗಾಗುಕಿಲ್ಲಾಗತ. ಎಲ್ಲವೂ ಉಂದ ನಿಮಿತ್ತ ಅಟ್ಟೆ. ಎನ್ನುತ್ತ ಒಳಗೊಳಗೆ ತೃಪ್ತನಾದರೂ ತೋರಿಕೆಯ ಕನಿಕರ ವ್ಯಕ್ತಪಡಿಸಿದ. ದೂರದಲ್ಲಿ ದೈತ್ಯಾಕಾರದ ಸುಳಿಗಾಳಿ ಎದ್ದು ತರಗಲೆಗಳನ್ನೆಲ್ಲಾ ಹಾರಿಸಿಕೊಂಡು ಹೋಗುತ್ತಿತ್ತು.

## ತಂತಿ ಬಾಲದ ಕವಲು ತೋಕೆ ಹಕ್ಕಿ



**ಸಂಸೆ** ಶಾಲೆಯಲ್ಲಿ ನಾನು ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದ ದಿನಗಳು, ಮಳೆಗಾಲ ಕಳೆದ ಮೇಲೆ ಕಳಸದಿಂದ ಸುಮಾರು ಹತ್ತು ಕಿಲೋಮೀಟರ್ ದೂರದ ಸಂಸೆಗೆ ಪ್ರತಿ ದಿನ ಸೈಕಲ್ ತುಳಿದುಕೊಂಡು ಹೋಗುತ್ತಿದ್ದೆ. ಅಂಕುಡೊಂಕಿನ, ಏರು ತಗ್ಗಿನ ಹಾವು ಹರಿದಂತೆ ಕಣುವ ದಾರಿಯಲ್ಲಿ ಬೆಳಿಗ್ಗೆ ಮತ್ತು ಸಂಜೆ ಸೈಕಲ್ ತುಳಿಯುವುದು ಒಂದು ಅದ್ಭುತ ಅನುಭವ. ಬೆಳಿಗ್ಗೆ ಹೋಗಲು ಒಂದು ಗಂಟೆ, ಸಂಜೆ ಹಿಂದೆ ಬರಲು ಒಂದು ಗಂಟೆ. ಕಾಫಿ ಮತ್ತು ಟೀ ತೋಟಗಳ ನಡುವೆ ಕ್ರಮಿಸುವ ದಾರಿಯಲ್ಲಿ ಸೈಕಲ್ ತುಳಿಯುವಾಗ ಮುಂದಿನ ತಿರುವಿನಲ್ಲಿ ವಾಹನ ಬರುವ ಮೊದಲೇ ಅದರ ಶಬ್ದ ಕೇಳಿಸಿ ಬಿಡುತ್ತಿತ್ತು. ಅಷ್ಟೊಂದು ನಿಶ್ಯಬ್ದ ಮತ್ತು ನಿರ್ಜನ ಬೀದಿ ಅದು.

ಅಂತಹ ಬೀದಿಯಲ್ಲಿ ಪುಟ್ಟ ಹಕ್ಕಿ ಕೂಗಿದರೂ ಅದರ ಶಬ್ದ ಸೈಕಲ್ ಸವಾರನಾದ ನನ್ನ ಕಿವಿಗೆ ಕೇಳಿಸಿ ಬಿಡುತ್ತಿತ್ತು. ರಸ್ತೆಯಂಚಿನಲ್ಲಿ ತೋಟಗಳ ಬೇಲಿಯ ಮೇಲೆ ಕುಳಿತ, ಆ ಕಡೆಯಿಂದ ಈ ಕಡೆಗೆ ಹಾರುವ ಹಕ್ಕಿಗಳಿಗೆ ಹಾಯ್ ಎಂದು ಹೇಳುತ್ತಾ ದಾರಿ ಸಾಗಿದ್ದೇ ತಿಳಿಯುತ್ತಿರಲಿಲ್ಲ. ಸಂಸೆಯ ಪೇಟೆ ದಾಟಿ ಮುಂದೆ ಬಂದರೆ ಅಲ್ಲೊಂದು ನದಿ, ಸೋಮಾವತೀ ಎಂದು ಅದರ ಹೆಸರು. ಕುದುರೆಮುಖ ಪರ್ವತದ ತಪ್ಪಲಿನಲ್ಲಿ ಹುಟ್ಟಿ, ಸಂಸೆಯ ಮೂಲಕ ಹರಿದು ಮುಂದೆ ಭದ್ರಾ ನದಿಯನ್ನು ಸೇರುತ್ತಿತ್ತು. ಅದನ್ನು ದಾಟಿ ಹೋಗಲು ಒಂದು ಸೇತುವೆ. ಸೇತುವೆಯಲ್ಲಿ ನಿಂತು ಹರಿಯುತ್ತಿದ್ದ ಸೋಮಾವತಿಯನ್ನು ನೋಡುವುದೇ ಚಂದ.

ಒಂದು ದಿನ ಹೀಗೆ ನಿಂತು ನೋಡುತ್ತಿದ್ದಾಗ ಸೇತುವೆಯ ಕೆಳಗಿನಿಂದ ಆಕಾಶಕ್ಕೆ ಹಾರಿದ ಹಕ್ಕಿ ಯೊಂದು ಯಾವುದೋ ಸಣ್ಣ ಹುಳವೊಂದನ್ನು ಹಿಡಿದುಕೊಂಡು ಬಂದಿತು. ವಿದ್ಯುತ್ ತಂತಿಯ ಮೇಲೆ ಎರಡು ಪುಟಾಣಿ ಮರಿಗಳು ಚೀಂವ್ ಚೀಂವ್ ಎಂದು ಗುಟುಕಿಗಾಗಿ ಬಾಯಿ ತೆರೆದು ಕಾಯುತ್ತಿದ್ದವು. ತಲೆಯ ಮೇಲೊಂದು ಕಡುಕಂದು ಬಣ್ಣದ ಟೋಪಿ, ಬೆನ್ನು, ರೆಕ್ಕೆ, ಬಾಲಗಳೆಲ್ಲ ಸುಂದ ರವಾದ ಕಡುನೀಲಿ ಬಣ್ಣ, ಕುತ್ತಿಗೆಯಿಂದ ಹೊಟ್ಟೆಯ ಭಾಗವೆಲ್ಲ ಶುಭ್ರ ಬಿಳೀ ಬಣ್ಣ. ಬಾಲದ ತಿದಿಗೆ ಎರಡು ತಂತಿಯಂತಹ ರಚನೆ. ಮರಿಗಳಿಗೆ ಗುಟುಕು ನೀಡಿದ್ದೇ ತಡ ಕೆಳಕ್ಕೆ ಡೈವ್ ಹೊಡೆದು ಗಾಳಿಯಲ್ಲಿ ತೇಲುತ್ತಾ ಯುದ್ಧ ವಿಮಾನದಂತೆ ಹಾರಾಡುತ್ತಾ ಇನ್ನೊಂದು ಹುಳುವನ್ನು ಹಿಡಿದು ತಂದು ಮರಿಗಳಿಗೆ ಗುಟುಕು ತಿನ್ನಿಸುತ್ತಿತ್ತು.

ಒಂದು ಹಕ್ಕಿ ಹಾರಿ ಕೆಲವೇ ಕ್ಷಣದಲ್ಲಿ ಮತ್ತೆ ತಿರುಗಿ ಬರುತ್ತಿದೆ ಎಂದುಕೊಂಡಿದ್ದೆ. ಸ್ವಲ್ಪ ಹೊತ್ತಿನಲ್ಲಿ ಮರಿಗಳ ಹೊಟ್ಟೆ ತುಂಬಿದಾಗ ಒಂದೇ ರೀತಿ ಕಾಣುವ ಎರಡು ಹಕ್ಕಿಗಳು ಮರಿಗಳ ಸಮೀಪ ಬಂದು ಕುಳಿತವು. ಆಗಲೇ ತಿಳಿದದ್ದು ಗಂಡು ಮತ್ತು ಹೆಣ್ಣು ಹಕ್ಕಿಗಳೆರಡೂ ನೊಡಲು ಒಂದೇ ರೀತಿ ಇರುತ್ತವೆ ಮತ್ತು ಎರಡೂ ಹುಳುಗಳನ್ನು ಹಿಡಿದು ತಂದು ಮರಿಗಳಿಗೆ ತಿನ್ನಿಸುತ್ತವೆ ಎಂದು. ಈ ಹಕ್ಕಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹುಡುಕಿದಾಗ ಇದರ ಹೆಸರಿಗೂ ಇದು ಹುಳು ಹಿಡಿಯುವ ವಿಧಾನಕ್ಕೂ ಇರುವ ಸಂಬಂಧ ತಿಳಿದು ಆಶ್ಚ ರ್ಯವಾಯಿತು. ಆಕಾಶದಲ್ಲಿ ಹಾರಾಡು ತ್ತಲೇ ಪುಟಾಣಿ ಕೀಟಗಳನ್ನು ಗುರುತಿಸಿ ವೇಗವಾಗಿ ಅದರತ್ತ ಹಾರಿ ಬಾಯಿ ತೆರೆದು ಕೊಂಡೆ ಅವುಗಳನ್ನು ನುಂಗುವುದರಿಂದ ಈ ಹಕ್ಕಿಗಳನ್ನು ಎಂದು ಕರೆಯುತ್ತಾರೆ. ಸ್ವಾಲೋದಲ್ಲಿ ಇನ್ನೂ ಅನೇಕ ಉಪಜಾತಿ ಗಳಿವೆ ತಂತಿಯಂತಹ ಉದ್ದನೆಯ ಎರಡು ಬಾಲಗಳಿರುವುದರಿಂದ ಎಂದು ಕರೆಯುತ್ತಾರೆ. ಸೇತುವೆಯ ಕೆಳಗಡೆ ಮಣ್ಣು ಮತ್ತು ಹುಲ್ಲುಗಳನ್ನು ಬಳಸಿ ಸೇತುವೆಯ ತಳಭಾಗಕ್ಕೆ ಅಂಟಿಸಿದಂತಹ ಗೂಡನ್ನು ಮಾಡಿ ಮೊಟ್ಟೆ ಇಟ್ಟು ಮರಿ ಮಾಡಿತ್ತದೆ. ನಿಮ್ಮ ಆಸುಪಾಸಿನಲ್ಲೂ ಈ ಹಕ್ಕಿ ನೋಡಲು ಸಿಗಬಹುದು.

**-ಅರವಿಂದ ಕುಡ್ಲ, ಬಂಟ್ವಾಳ**

## ಜೀವಾವಧಿ

**ದೇಹ**ದಲ್ಲಿ ತ್ರಾಣವಿಲ್ಲ, ಬದುಕಿನಲ್ಲಿ ಆಸೆಗಳಿಲ್ಲ, ಎಲ್ಲವೂ ಮುಗಿದುಹೋಗಿದೆ. ಕ್ಷಣದಲ್ಲಿ ಕೋಪದ ಕೈಗೆ ಬುದ್ಧಿಯನ್ನು ಕೊಟ್ಟು ಎದುರಿಗಿದ್ದವರ ಪ್ರಾಣವನ್ನೇ ತೆಗೆದಿದ್ದಾರೆ, ಶಿಕ್ಷೆ ಘೋಷ ಣೆಯಾಯಿತು ಅವರ ಹಣೆಪಟ್ಟಿಗೆ ಜೀವಾವಧಿ ಶಿಕ್ಷೆ ಅಂಟಿಬಿಟ್ಟಿತ್ತು. ಮನೆಯವರು ದೂರಾದರು, ಊರವರು ಮರೆತೆಬಿಟ್ಟರು, ಸಂಬಂಧಿಕರು ಅಪರಿಚಿತರಾದರು, ಬದುಕಿನ ಎಲ್ಲಾ ಆಸೆಗಳನ್ನು ಕಳೆದುಕೊಂಡು ದಿನವನ್ನು ದೂಡುತ್ತಿದ್ದಾರೆ. ಸಾವು ಒಂದನ್ನ ಎದುರು ನೋಡುತ್ತಿದ್ದಾರೆ, ಹೊರ ಜಗತ್ತಿನ ಊರುಕೇರಿ ಜಾತ್ರೆ ಕಾರ್ಯಕ್ರಮಗಳನ್ನ ಭೇಟಿ ಮಾಡುವ ಹಾಗಿಲ್ಲ, ಜೊತೆಗೆ ತನ್ನವರು ಅಂದುಕೊಳ್ಳುವವರ ಕೈ ಹಿಡಿದು ಓಡಾಡುವ ಹಾಗಿಲ್ಲ ಪೇಟೆ ಬೀದಿಯಲ್ಲಿ ನಡೆಯುವ ಹಾಗಿಲ್ಲ ಎಲ್ಲವೂ ನಾಲ್ಕು ನಾಲ್ಕು ಗೋಡೆಯ ಒಳಗಡೆ ಒಂದೇ ತರನಾದ ಬಟ್ಟೆಯಲ್ಲಿ ಅದೇ ಆಹಾರ ಕ್ರಮದಲ್ಲಿ ರೋಸಿ ಹೋಗಿಬಿಟ್ಟಿದೆ ತಪ್ಪು ಮಾಡಬಾರದಿತ್ತು ಅನ್ನುವ ಪ್ರಾಯಶ್ಚಿತ್ತ ಕಾಡಿದೆ ಆದರೂ ಜೀವನದ ಅವಧಿ ಮುಗಿಯುವವರೆಗೂ ಇದೇ ಗೋಡೆಗಳನ್ನು ನೋಡುತ್ತಾ ಬದುಕಬೇಕಾಗಿದೆ ಅವನಿಗೆ ನೋವಿದೆ ತಾನು ಮಾಡಿದ ತಪ್ಪಿನ ಅರಿವಾಗಿದೆ.

**-ಧೀರಜ್ ಬೆಳ್ಳಾರೆ**

# ತಂಪು ಮರುಭೂಮಿಯಲ್ಲಿ ಬೆಂಕಿಯ ಕಿಡಿ ಹೊತ್ತಿಸಿದವರಾರು?

> ■ **ಲೇಹ್‌ನ ಸಂಸ್ಕೃತಿಯನ್ನು ಕೂಡ ರಕ್ಷಿಸಲೇಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಅಲ್ಲಿನ ಸಂಪನ್ಮೂಲಗಳ ಮೇಲೆ ಅಲ್ಲಿನ ಜನರಿಗೇ ಮೊದಲ ಹಕ್ಕಿದೆ. ಆದರೆ ಆ ಗುರಿಯನ್ನು ಸಾಧಿಸಲು ಹಿಂಸಾಚಾರ ಖಂಡಿತ ಸರಿಯಾದ ಮಾರ್ಗ ಅಲ್ಲ. ಗಲಭೆಯನ್ನು ಯಾರೂ ಸಮರ್ಥಿಸಿಕೊಳ್ಳಬಾರದು.**

ಚೀನಾ ಜತೆಗೆ ಗಡಿ ಹೊಂದಿರುವ ಲಡಾಖ್ ನಮ್ಮ ದೇಶದ ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಒಂದು. ಅಲ್ಲಿ ನಡೆಯುವ ಯಾವುದೇ ಷಡ್ಯಂತ್ರಗಳು ಅನಾಹುತಕಾರಿಯಾಗಿ ಪರಿಣಮಿಸಬಲ್ಲವು. ಹೀಗಾಗಿ ಭಾರತ ಎಚ್ಚರಿಕೆಯ ಹೆಜ್ಜೆ ಇರಿಸಬೇಕಿದೆ. ಲಡಾಖ್‌ನ ಬೇಡಿಕೆ ಮತ್ತು ಭಾವನೆಗಳನ್ನೂ ಗೌರವಿಸಬೇಕಿದೆ.

ದಶಕದ ಹಿಂದೆ ಬಾಕ್ಸಾಫೀಸನ್ನು ಕೊಳ್ಳೆ ಹೊಡೆದಿದ್ದ ಆಮಿರ್ ಖಾನ್ ಅಭಿನಯದ 3 ಈಡಿಯಟ್ಸ್ ಸಿನಿಮಾ ನೆನಪಿದೆಯೇ? ಅದರಲ್ಲಿದ್ದ ಫುನ್ಸುಖ್ ವಾಂಗ್ದು ಪಾತ್ರವು ಸೋನಮ್ ವಾಂಗ್‌ಚುಕ್‌ನ ಜೀವನವನ್ನು ಆಧರಿಸಿದ್ದು ಎಂದು ಹೇಳಲಾಗುತ್ತದೆ. ಸೋನಮ್ ವಾಂಗ್‌ಚುಕ್ ಲಡಾಖ್‌ನ ಲೇಹ್‌ನಲ್ಲಿರುವ ಪರಿಸರ ಮತ್ತು ಸಾಮಾಜಿಕ ಹೋರಾಟಗಾರ. ಜನರಿಗೆ ಈ ಹಿಂದೆಯೂ ಅವನು ಪರಿಚಿತನೇ ಆಗಿದ್ದ. ಆದರೆ ಸಿನಿಮಾ ಬಂದ ನಂತರ ಭಾರತದ ಎಲ್ಲೆಡೆಯ ಜನರ ಹೃದಯದಲ್ಲಿ ಅವನಿಗೊಂದು ಸ್ಥಾನ ಪ್ರಾಪ್ತವಾಗಿತ್ತು.

ಈಗ ಚೋದ್ಯವೆಂದರೆ, ಲಡಾಖ್‌ನಲ್ಲಿ ನಡೆದ ವ್ಯಾಪಕ ಹಿಂಸಾಚಾರದ ಬಳಿಕ ಅವನ ಮೇಲೇ ಗಂಭೀರ ಆರೋಪಗಳು ಕೇಳಿ ಬರುತ್ತಿವೆ. ಈಗಾಗಲೇ ಪೊಲೀಸರು ಅವನನ್ನು ಬಂಧಿಸಿದ್ದಾರೆ. ಪ್ರಶ್ನೆ ಏನೆಂದರೆ, ನಿಜವಾಗಿಯೂ ಹಿಂಸಾಚಾರಕ್ಕೆ ಅವನ ಪ್ರಚೋದನೆಯೇ ಕಾರಣವೇ ಅಥವಾ ಗಡಿಯ ಗುಂಟ ಭಾರತವನ್ನು ದುರ್ಬಲಗೊಳಿಸಲು ಬೇರೆ ಯಾವುದಾದರೂ ಹಿತಾಸಕ್ತಿಗಳು ಸಂಚು ರೂಪಿಸಿವೆಯೇ? ಈವರೆಗೂ ಲೇಹ್‌ನಲ್ಲಿ ನಡೆದ ಹಿಂಸಾಚಾರದಲ್ಲಿ ನಾಲ್ವರು ಜೀವ ಕಳೆದು ಕೊಂಡಿದ್ದಾರೆ.

ಇನ್ನೂ ಸಾಕಷ್ಟು ಜನರು ಗಾಯಗೊಂಡಿದ್ದಾರೆ. ಗಲಭೆಗೆ ಕಾರಣವಾದ ಗಂಭೀರ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕಿಂತಲೂ ಮೊದಲು ಈ ವಿವಾದದ ಹಿನ್ನೆಲೆಯನ್ನು ಕೊಂಚ ಅರಿತುಕೊಳ್ಳ ಬೇಕು. ಲಡಾಖ್ ಎಂಬುದು ಒಂದು ಪ್ರದೇಶದ ಹೆಸರು. ಅಲ್ಲಿನ ಪ್ರಮುಖ ಪಟ್ಟಣ ಲೇಹ್. ಲಡಾಖ್ ಈ ಹಿಂದೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಭಾಗವಾಗಿತ್ತು.

ಆದರೆ ಲಡಾಖ್‌ನ ಜನರಿಗೆ ತಾವು ಯಾವತ್ತೂ ನಿರ್ಲಕ್ಷಿತರು ಎಂಬ ಭಾವನೆಯಿತ್ತು. ಸ್ವಾತಂತ್ರ್ಯ ನಂತರ ಕೆಲವೇ ವರ್ಷಗಳಲ್ಲಿ ಆಗಿನ ಲಡಾಖ್ ಬುದ್ದಿಸ್ಟ್ ಅಸೋಸಿಯೇಷನ್‌ನ ಅಧ್ಯಕ್ಷ ಚೆವಾಂಗ್ ರಿಗ್ಜಿನ್ ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಅವರಿಗೆ ಒಂದು ಪತ್ರ ಬರೆದು, ಲಡಾಖನ್ನು ಜಮ್ಮು ಮತ್ತು ಕಾಶ್ಮೀರದಿಂದ ಪ್ರತ್ಯೇಕಿಸಬೇಕು.


ಏಕೆಂದರೆ ಕಾಶ್ಮೀರಕ್ಕೂ ಈ ಪ್ರದೇಶಕ್ಕೂ ಯಾವುದೇ ಸಂಬಂಧವಿಲ್ಲ. ದೂರದ ಜತೆಗೆ ಧರ್ಮ, ಜನಾಂಗ, ಭಾಷೆ, ಸಂಸ್ಕೃತಿಗಳೂ ಭಿನ್ನವಾಗಿವೆ ಎಂದು ಹೇಳಿದ್ದರು. ಲಡಾಖ್‌ನ ಇನ್ನೊಬ್ಬ ಪ್ರಭಾವಿ ನಾಯಕ ಲಾಮಾ ಕುಶೋಕ್ ಬಕುಲ ಕೂಡ ಶೇಖ್ ಅಬ್ದುಲ್ಲಾ ಜತೆಗಿನ ವೈಮನಸ್ಯವನ್ನು ಮುಂದಿಟ್ಟು, ಲಡಾಖ್‌ನ ಬೇಡಿಕೆಗಳನ್ನು ಈಡೇರಿಸದಿದ್ದರೆ ನಾವು ಟಿಬೆಟ್‌ನ ಜತೆ ಕೈಜೋಡಿಸ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದ.

ಅದು ಕೇವಲ ಎಚ್ಚರಿಕೆಯೇ ಆಗಿದ್ದರೂ ಲಡಾಖ್ ಕೇಂದ್ರಾಡಳಿತ ಪ್ರದೇಶದ ಸೃಜನೆಗಾಗಿ ಶಾಂತಿಯುತ ಹೋರಾಟ ನಡೆಯುತ್ತಲೇ ಇತ್ತು. 1979ರಲ್ಲಿ ಲಡಾಖನ್ನು ಲೇಹ್ ಮತ್ತು ಕಾರ್ಗಿಲ್ ಎಂಬ ಎರಡು ಜಿಲ್ಲೆಗಳಾಗಿ ವಿಭಾಗಿಸಲಾಯಿತು. ಕಾರ್ಗಿಲ್ ಮುಸ್ಲಿಂ ಬಹು ಸಂಖ್ಯಾತ ಜಿಲ್ಲೆಯಾಗಿದ್ದರೆ, ಲೇಹ್ ಬೌದ್ಧರ ಬಹುಸಂಖ್ಯಾತ ಜಿಲ್ಲೆಯಾಗಿತ್ತು. ಆದರೆ ಬಹಳ ಬೇಗ ಲಡಾಖ್‌ನ ಬೌದ್ಧರು ಜಮ್ಮು ಮತ್ತು ಕಾಶ್ಮೀರ ರಾಜ್ಯ ಕಾರ್ಗಿಲ್‌ನ ಮುಸ್ಲಿಮರಿಗೆ ಹೆಚ್ಚು ಒತ್ತು ನೀಡಿ, ನಮ್ಮನ್ನು ಕಡೆಗಣಿಸುತ್ತಿದೆ ಎಂದು ಕ್ಯಾತೆ ತೆಗೆದರು. ಈ ಭಿನ್ನಮತ 1989ರ ವೇಳೆಗೆ ದೊಡ್ಡ ಹೋರಾಟವಾಗಿ ಭುಗಿಲೆದ್ದು, ಹಿಂಸಾಚಾರದಲ್ಲಿ ಮೂವರು ಮೃತಪಟ್ಟಿದ್ದರು.


ಕೊನೆಗೆ 2019ರಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಒಡೆದು ಲಡಾಖ್ ಕೇಂದ್ರಾಡಳಿತ ಪ್ರದೇಶ ಮಾಡಲಾಯಿತು. ಆಗ ಲಡಾಖ್ ಪ್ರಾಂತದಲ್ಲಿ ಸಂಭ್ರಮಾಚರಣೆ ನಡೆಯಿತು. ಎಲ್ಲೆಡೆ ವಿಜಯೋತ್ಸಾಹ. ವಾಂಗ್‌ಚುಕ್ ಕೂಡ ಪ್ರಧಾನಿ ನರೇಂದ್ರ ಮೋದಿಯವರನ್ನು ಮುಕ್ತ ಕಂಠದಿಂದ ಹೊಗಳಿದರು. ಹೀಗೆ ಇಡೀ ಪ್ರದೇಶವೇ ಇನ್ನಿಲ್ಲದಂತೆ ವಿಜಯೋತ್ಸವ ನಡೆಸಿದ ಮೇಲೆ ಈಗ ಇದ್ದಕ್ಕಿದ್ದಂತೆ ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡಬೇಕು ಮತ್ತು ಸಂವಿಧಾನದ ಆರನೇ ಪರಿಚ್ಛೇದದಲ್ಲಿ ಅದನ್ನು ಸೇರಿಸಬೇಕು ಎಂದು ಕೆಲವೇ ವರ್ಷಗಳಲ್ಲಿ ಹಿಂಸಾಚಾರ ಆರಂಭವಾಗಿದ್ದು ಏಕೆ ಮತ್ತು ಹೇಗೆ? ಆರನೇ ಪರಿಚ್ಛೇದ ಅಂದರೇನು ಎಂಬುದು ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ.

ಇದು ಅವರ ಅವಗಾಹನೆಗಾಗಿ: ಆರನೇ ಪರಿಚ್ಛೇದವು ನಿರ್ಲಕ್ಷಿತ ಪ್ರದೇಶಗಳ ಕಲೆ, ಸಂಸ್ಕೃತಿ, ಭೂಮಿ ಮತ್ತು ಇನ್ನಿತರ ಸಂಪನ್ಮೂಲಗಳನ್ನು ರಕ್ಷಿಸಲು ಮಾಡಿಕೊಳ್ಳುವ ಒಂದು ಆಡಳಿತಾತ್ಮಕ ವ್ಯವಸ್ಥೆ. ನಾಲ್ಕು ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ಮಿಜೋರಂ ಮತ್ತು ತ್ರಿಪುರಾಗೆ ಈಗಾಗಲೇ ಈ ಪರಿಚ್ಛೇದದಡಿ ಮಾನ್ಯತೆ ನೀಡಲಾಗಿದೆ.

ಲೇಹ್‌ನ ಸಂಸ್ಕೃತಿಯನ್ನು ಕೂಡ ರಕ್ಷಿಸಲೇಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಅಲ್ಲಿನ ಸಂಪನ್ಮೂಲಗಳ ಮೇಲೆ ಅಲ್ಲಿನ ಜನರಿಗೇ ಮೊದಲ ಹಕ್ಕಿದೆ. ಆದರೆ ಆ ಗುರಿಯನ್ನು ಸಾಧಿಸಲು ಹಿಂಸಾಚಾರ ಖಂಡಿತ ಸರಿಯಾದ ಮಾರ್ಗ ಅಲ್ಲ. ಗಲಭೆಯನ್ನು ಯಾರೂ ಸಮರ್ಥಿಸಿಕೊಳ್ಳಬಾರದು. ನಾನು ಲಡಾಖ್‌ಗೆ ಹಲವು ಬಾರಿ ಹೋಗಿ ಬಂದಿದ್ದೇನೆ. ಅಲ್ಲಿನ ಜನರು ತುಂಬಾ ಸರಳ, ಸಜ್ಜನರು ಮತ್ತು ಕಷ್ಟಜೀವಿಗಳು.



ಇತ್ತೀಚೆಗೆ ನನ್ನ ತಮ್ಮ ರಾಜೇಂದ್ರನ ಜತೆಗೆ ಅಲ್ಲಿಗೆ ಹೋಗಿ ಲೋಕಮತ್ ಮೀಡಿಯಾ ಗ್ರೂಪ್‌ನಿಂದ ಕಾರ್ಗಿಲ್‌ನಲ್ಲಿ ಸೈನಿಕರಿಗಾಗಿ ನಿರ್ಮಿಸಿದ ಬೆಚ್ಚಗಿನ ಆಶ್ರಯ ತಾಣಗಳನ್ನು ಉದ್ಘಾಟಿಸಿ ಬಂದಿದ್ದೇನೆ. ಮಾರ್ಗಮಧ್ಯೆ ಲೇಹ್‌ನಲ್ಲಿ ಸ್ವಲ್ಪ ಹೊತ್ತು ನಿಂತಾಗ ಅಲ್ಲಿನ ಜನರ ಜತೆಗೆ ಮಾತನಾಡುತ್ತಿದ್ದೆ. ಈ ಹಿಮ ಮರುಭೂಮಿಯಲ್ಲಿ ಬದುಕು ತುಂಬಾ ಕಷ್ಟ. ಮೈನಸ್ 10 ಡಿಗ್ರಿಯಷ್ಟು ಕೆಳಗೆ ತಾಪಮಾನ ಕುಸಿಯುತ್ತದೆ.



ಜನವರಿ ಮತ್ತು ಡಿಸೆಂಬರ್ ತಿಂಗಳಲ್ಲಿ ತಾಪ ತುಂಬಾ ಕಡಿಮೆಯಾಗುತ್ತದೆ. ಆ ಕಷ್ಟದಲ್ಲಿಯೂ ಖುಷಿಯಿಂದ ಬದುಕುವ ಸ್ಥಳೀಯ ಜನರು ಸದಾ ಶಾಂತಿಪ್ರಿಯರು. ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಯಾವಾಗಲೂ ಕಟಿಬದ್ಧರಾಗಿರುತ್ತಾರೆ. 50 ವರ್ಷಗಳ ಹಿಂದೆಯೇ ಅವರು ಪ್ಲಾಸ್ಟಿಕ್ ನಿಷೇಧ ಮಾಡಿಕೊಂಡಿದ್ದಾರೆ.

ಸ್ಥಳೀಯಾಡಳಿತದ ಸೂಚನೆಗಿಂತ ಹೆಚ್ಚಾಗಿ ಜನರೇ ಸ್ವಯಂಪ್ರೇರಿತರಾಗಿ ಪ್ಲಾಸ್ಟಿಕ್ ನಿಷೇಧಿಸಿದ್ದಾರೆ. ಅಲ್ಲಿನ ಸುದೀರ್ಘ ಇತಿಹಾಸ, ಸಂಸ್ಕೃತಿ, ಪರಂಪರೆ ಹಾಗೂ ಶಾಂತಿಪ್ರಿಯ ಜನರ ಬದುಕಿನ ಹಿನ್ನೆಲೆಯಲ್ಲಿ ನೋಡಿದರೆ ಈಗ ನಡೆಯುತ್ತಿರುವ ಹಿಂಸಾಚಾರ ಆಶ್ಚರ್ಯ ಹುಟ್ಟಿಸುತ್ತದೆ. ಶಾಂತ ಜನರು ಈ ಪರಿ ಹಿಂಸೆಗೆ ಪ್ರಚೋದಿತರಾಗುತ್ತಿರುವುದು ಹೇಗೆ? ಜನರು ಹೇಳುವ ಪ್ರಕಾರ ಪರಿಸರ ಹೋರಾಟಗಾರ ಸೋನಮ್ ವಾಂಗ್‌ಚುಕ್ ಸೆಪ್ಟೆಂಬರ್ 10ರಂದು 35 ದಿನಗಳ ಉಪವಾಸ ಸತ್ಯಾಗ್ರಹ ಆರಂಭಿಸಿದ್ದ. ಅದಕ್ಕೆ ಲೇಹ್ ಅಪೆಕ್ಸ್ ಬಾಡಿ (ಎಲ್‌ಎಬಿ)ಯ ಯುವ ಘಟಕ ಲೇಹ್‌ನಲ್ಲಿ ಬೆಂಬಲ ಸೂಚಿಸಿ ಶಾಂತಿಯುತ ಬಂದ್‌ಗೆ ಕರೆ ನೀಡಿತ್ತು.

ಆ ದಿನ ಮಾರುಕಟ್ಟೆ ಮುಚ್ಚಿತ್ತು. ಇನ್ನುಳಿದ ಎಲ್ಲವೂ ಸಹಜವಾಗಿತ್ತು. ಆದರೆ ಇದ್ದಕ್ಕಿದ್ದಂತೆ ಯಾರೋ ಕಿಡಿಗೇಡಿಗಳು ಬಂದು ಬಿಜೆಪಿ ಕಚೇರಿ ಮೇಲೆ ದಾಳಿ ನಡೆಸಿ, ಕಲ್ಲು ತೂರಾಟ ಆರಂಭಿಸಿದರು. ಕಾಂಪೌಂಡ್‌ನಲ್ಲಿದ್ದ ಕಟ್ಟಡವೊಂದಕ್ಕೆ ಬೆಂಕಿ ಹಚ್ಚಿ, ವಾಹನಗಳಿಗೂ ಬೆಂಕಿಯಿಟ್ಟರು. ಅದಕ್ಕೆ ಪ್ರತಿಯಾಗಿ ಪೊಲೀಸರು ಮತ್ತು ಅರೆಸೇನಾಪಡೆಯವರು ಗಾಳಿಯಲ್ಲಿ ಗುಂಡು ಹಾರಿಸಿ, ಅಶ್ರುವಾಯು ಸಿಡಿಸಿ, ಲಾಠಿ ಪ್ರಹಾರ ನಡೆಸಿ ಪರಿಸ್ಥಿತಿ ನಿಯಂತ್ರಿಸಲು ಯತ್ನಿಸಿದರು. ಆಗ ಬಹಳಷ್ಟು ಜನರು ಗಾಯಗೊಂಡರು. ಹಿಂಸಾಚಾರವನ್ನು ಗಮನಿಸಿ ಬೇಸರಗೊಂಡ ಸೋನಮ್ ವಾಂಗ್‌ಚುಕ್ ತನ್ನ ಉಪವಾಸ ಅಂತ್ಯಗೊಳಿಸಿ, ಎಲ್ಲರೂ ಸಂಯಮ ಕಾಯ್ದುಕೊಳ್ಳುವಂತೆ ಕರೆ ನೀಡಿದ. ಯುವಕರೇ, ನಿಮ್ಮ ಉದ್ದೇಶ ನನಗೆ ಅರ್ಥವಾಗುತ್ತದೆ. ಆದರೆ ಯಾವುದೇ ಕಾರಣಕ್ಕೂ ಹಿಂಸೆಯಲ್ಲಿ ತೊಡಗಬಾರದು ಎಂದು ತಿಳಿಹೇಳಿದ.

ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ ಆರೋಪದಡಿ ಲೇಹ್‌ನ ಕಾಂಗ್ರೆಸ್ ಕಾರ್ಪೊರೇಟರ್ ಫುಂಟ್ಸೋಗ್ ಸ್ಟಾಂಜಿನ್ ತ್ಸೆ ಪಾಗ್ ವಿರುದ್ಧ ಪೊಲೀಸರು ಕೇಸು ದಾಖಲಿಸಿದರು. ಸೋನಮ್ ವಾಂಗ್‌ಚುಕ್‌ನ ಸಂಸ್ಥೆಯ ವಿರುದ್ಧವೂ ಕ್ರಮ ಕೈಗೊಂಡರು. ಅವನ ಸಂಸ್ಥೆಯಿನ್ನು ವಿದೇಶಗಳಿಂದ ಹಣಕಾಸಿನ ದೇಣಿಗೆ ಸ್ವೀಕರಿಸುವಂತಿಲ್ಲ. ಈಗ ನಮ್ಮ ಮನಸ್ಸಿನಲ್ಲಿ ಮೂಡುವ ಪ್ರಶ್ನೆಯೇನೆಂದರೆ, ಲಡಾಖ್‌ನ ಜನಪ್ರತಿನಿಧಿಗಳ ಜತೆಗೆ ಕೇಂದ್ರ ಸರಕಾರ ನಿರಂತರವಾಗಿ ಮಾತುಕತೆ ನಡೆಸುತ್ತಿದ್ದರೂ ಸೋನಮ್ ವಾಂಗ್‌ಚುಕ್ ಅಥವಾ ಇನ್ನಾರೇ ಆಗಲಿ, ಏಕೆ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದರು? ಅದರ ಉದ್ದೇಶವೇನು? ಅಕ್ಟೋಬರ್ 6ರಂದು ಇನ್ನೊಂದು ಸುತ್ತಿನ ಮಾತುಕತೆ ನಿಗದಿಯಾಗಿದೆ.

ಅದರಲ್ಲಿ ಎಲ್‌ಎಬಿ ಮತ್ತು ಕಾರ್ಗಿಲ್ ಡೆಮಾಕ್ರಟಿಕ್ ಮೈತ್ರಿಕೂಟದ ನಾಯಕರು ಭಾಗವಹಿಸಲಿದ್ದಾರೆ. ಹೀಗೆ ಹಿಂಸಾಚಾರ ನಡೆಸುವುದರಿಂದ ಲಡಾಖ್‌ನ ಜನರ ಪ್ರತ್ಯೇಕ ರಾಜ್ಯದ ಬೇಡಿಕೆ ದುರ್ಬಲವಾಗುತ್ತದೆಯೇ ಹೊರತು ಅದಕ್ಕೆ ಹೆಚ್ಚಿನ ತೂಕವೇನೂ ಬರುವುದಿಲ್ಲ!

ಲಡಾಖ್‌ನ ಯುವಕರನ್ನು ಉದ್ದೇಶಪೂರ್ವಕವಾಗಿ ದಾರಿ ತಪ್ಪಿಸಲಾಗಿದೆ. ಹಾಗೆ ಮಾಡಿದವರು ಯಾರು, ಈ ಪ್ರಚೋದನೆಯ ಮೂಲ ಯಾವುದು ಎಂಬುದನ್ನು ಮೊದಲು ಪತ್ತೆಹಚ್ಚಬೇಕು. ಆಂತರಿಕ ಶಕ್ತಿಗಳು ಇದನ್ನು ಹುಟ್ಟುಹಾಕಿವೆಯೇ ಅಥವಾ ಬಾಹ್ಯ ಶಕ್ತಿಗಳ ಪಾತ್ರವೇನಾದರೂ ಇದೆಯೇ? ಈ ಪ್ರಶ್ನೆಗೆ ಉತ್ತರ ಹುಡುಕಿಕೊಳ್ಳುವುದು ಮುಖ್ಯ. ಏಕೆಂದರೆ ಲಡಾಖ್‌ಗೆ ಚೀನಾದ ಗಡಿ ಇದೆ.

ಅದು ಬಹಳ ಸೂಕ್ಷ್ಮ ಪ್ರದೇಶ. ಆಂತರಿಕವಾಗಿ ತಲೆದೋರುವ ಯಾವುದೇ ದೌರ್ಬಲ್ಯಗಳು ದೇಶದಲ್ಲಿ ಅಸ್ಥಿರತೆಯನ್ನು ಹರಡಬಹುದು. ಕಾಶ್ಮೀರಿ ಕಣಿವೆಯಲ್ಲಿ ಉಂಟಾಗಿದ್ದ ಆಂತರಿಕ ಭದ್ರತಾ ಸಮಸ್ಯೆಗಳು ದೇಶಕ್ಕೆ ಎಷ್ಟು ದೊಡ್ಡ ತಲೆನೋವು ನೀಡಿದ್ದವು ಎಂಬುದನ್ನು ನಾವು ನೋಡಿದ್ದೇವೆ.

ಹಾಗಿದ್ದರೆ ಲಡಾಖ್‌ನ ಸಮಸ್ಯೆಗೆ ಪರಿಹಾರ ಏನು? ನನ್ನ ಪ್ರಕಾರ, ಲಡಾಖಿನ ಜನರ ಭಾವನೆಗಳನ್ನು ನಾವು ಗೌರವಿಸಿ, ಅವರು ಏನು ಬಯಸುತ್ತಿದ್ದಾರೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಸೋನಮ್ ವಾಂಗ್‌ಚುಕ್ ದೇಶದ್ರೋಹಿಯಲ್ಲ ಎಂಬುದನ್ನೂ ತಿಳಿದುಕೊಳ್ಳಬೇಕು. ಲಡಾಖ್ ಮೂಲತಃ ಹೇಗಿತ್ತೋ ಹಾಗೇ ಉಳಿಸಿಕೊಳ್ಳಬೇಕು ಎಂದು ಆತ ಬಯಸುತ್ತಿದ್ದಾನೆ.

ಇದೇ ವೇಳೆ, ಕೆಲ ಅಂತಾರಾಷ್ಟ್ರೀಯ ಶಕ್ತಿಗಳು ಭಾರತದ ಆರ್ಥಿಕತೆಯು ದೈತ್ಯಾಕಾರದಲ್ಲಿ ಬೆಳೆಯುತ್ತಿರುವುದನ್ನು ನೋಡಿ ಹೊಟ್ಟೆಕಿಚ್ಚಿನಿಂದ ಕುದಿಯುತ್ತಿದ್ದು, ನಮ್ಮನ್ನು ದಮನ ಮಾಡಲು ಯತ್ನಿಸುತ್ತಿವೆ ಎಂಬುದನ್ನೂ ಅರ್ಥಮಾಡಿಕೊಳ್ಳಬೇಕು. ಲಡಾಖ್‌ನ ವಿಷಯದಲ್ಲಿ ಎಚ್ಚರಿಕೆಯ ನಡೆ ಅಗತ್ಯವಿದೆ.

ನಾವು ಏನೇ ಕ್ರಮಗಳನ್ನು ಕೈಗೊಂಡರೂ ಅದರಿಂದ ಭಾರತ ವಿರೋಧಿ ಶಕ್ತಿಗಳಿಗೆ ಲಾಭವಾಗದಂತೆ ನೋಡಿಕೊಳ್ಳಬೇಕು. ನಾವು ಇರಿಸುವ ಒಂದೇ ಒಂದು ತಪ್ಪು ಹೆಜ್ಜೆ ನಮ್ಮ ವಿರೋಧಿಗಳಿಗೆ ಭಾರತವನ್ನು ಮಟ್ಟ ಹಾಕಲು ಸಿಗುವ ಅಸವಾಗಿ ಪರಿಣ ಮಿಸಬಹುದು.

**- ಡಾ.ವಿಜಯ್ ದರಡಾ**

# ನೇಪಾಳದಲ್ಲಿ ಪ್ರವಾಹ, ಭೂಕುಸಿತ: 51 ಮಂದಿ ಸಾವು

• ಪ್ರಜೋದಯ ವರದಿ

**ಕಠ್ಮಂಡು:** ಭಾರೀ ಮಳೆಯಿಂದ ನೇಪಾಳದಲ್ಲಿ ಸಂಭವಿಸಿದ ಭೂಕುಸಿತ ಮತ್ತು ಪ್ರವಾಹದ ಪರಿಣಾಮ 51 ಮಂದಿ ಮೃತಪಟ್ಟಿದ್ದಾರೆ.

ಶುಕ್ರವಾರ ರಾತ್ರಿಯಿಂದ ಪೂರ್ವ ನೇಪಾಳದ ಹಲವೆಡೆ ನಿರಂತರವಾಗಿ ಮಳೆ ಸುರಿಯುತ್ತಿದೆ. ಶನಿವಾರ ರಾತ್ರಿ ಸಂಭವಿಸಿದ ಅವಘಡಗಳಲ್ಲಿ ಕೋಶಿ ಪ್ರಾಂತ್ಯದ ಇಲಾಮ್ ಜಿಲ್ಲೆಯೊಂದರಲ್ಲೇ 37 ಮಂದಿ ಮೃತಪಟ್ಟಿದ್ದಾರೆಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಪಂಚತಾರ ಜಿಲ್ಲೆಯಲ್ಲಿ ಭೂಕುಸಿತದಿಂದಾಗಿ ಒಬ್ಬರು ಮೃತಪಟ್ಟಿದ್ದಾರೆ. ಖೋಟಂಗ್‌ನಲ್ಲಿ ಒಬ್ಬರು ಮತ್ತು ಉದಯಪುರದಲ್ಲಿ ಇಬ್ಬರು ಪ್ರವಾಹದಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಸುವಾ ಜಿಲ್ಲೆಯಲ್ಲಿ ನದಿಯಲ್ಲಿ ಕೊಚ್ಚಿ ಹೋಗಿ ನಾಲ್ಕು ಮಂದಿ ನಾಪತ್ತೆಯಾಗಿದ್ದಾರೆ. ಪಂಚತಾರಾ ಜಿಲ್ಲೆಯಲ್ಲೂ ವ್ಯಕ್ತಿಯೊಬ್ಬರು ಅವಶೇಷಗಳಡಿ ಸಿಲುಕಿದ್ದಾರೆ. ಇಲಾಮ್, ಬಾರಾ ಮತ್ತು ಕಠ್ಮಂಡುವಿನಲ್ಲಿಯೂ ತಲಾ ಒಬ್ಬರು ನಾಪತ್ತೆಯಾಗಿದ್ದಾರೆ. ಗರ್ಭಿಣಿ ಸೇರಿ ನಾಲ್ವರನ್ನು ಭದ್ರತಾ ಸಿಬ್ಬಂದಿ ಹೆಲಿಕಾಪ್ಟರ್ ಮೂಲಕ ರಕ್ಷಣೆ ಮಾಡಿ, ಆಸ್ಪತ್ರೆಗೆ ದಾಖಲಿಸಿದ್ದಾರೆ.



### ಸಂಕಷ್ಟದಲ್ಲಿ ಸಾವಿರ ಜನರು

ಹಿಮಪಾತದಿಂದ ರಸ್ತೆಸಂಚಾರ ಸ್ಥಗಿತಗೊಂಡಿರುವುದರಿಂದ ಒಂದು ಸಾವಿರ ಮಂದಿ ಮೌಂಟ್ ಎವರೆಸ್ಟ್‌ನ ಟಿಬೆಟ್ ಭಾಗದ ಪೂರ್ವ ಇಳಿಜಾರಿನಲ್ಲಿ ಸಿಲುಕಿಹಾಕಿಕೊಂಡಿದ್ದಾರೆ. ಇಳಿಜಾರಿನಲ್ಲಿ ಸಿಲುಕಿರುವವರ ರಕ್ಷಣೆಗಾಗಿ ಸ್ಥಳೀಯರು ಮತ್ತು ರಕ್ಷಣಾ ತಂಡ ಕಾರ್ಯಾಚರಣೆ ನಡೆಸುತ್ತಿದೆ ಎಂದು ಚೀನಾದ ಮಾಧ್ಯಮಗಳು ವರದಿ ಮಾಡಿವೆ. ಕೆಲ ಪ್ರವಾಸಿಗರನ್ನು ಈಗಾ ಗಲೇ ಕೆಳಗೆ ಕರೆತರಲಾಗಿದೆ. ಶುಕ್ರವಾರ ಆರಂಭಗೊಂಡಿದ್ದ ಹಿಮಪಾತ ಶನಿವಾರವೂ ಮುಂಂದುವರಿದಿತ್ತು.

### ನೇಪಾಳಕ್ಕೆ ನೆರವು ನೀಡಲು ಬದ್ಧ: ಪ್ರಧಾನಿ ಮೋದಿ

ಪ್ರವಾಹದಿಂದ ತತ್ತರಿಸಿರುವ ನೇಪಾಳಕ್ಕೆ ಯಾವುದೇ ರೀತಿಯ ನೆರವು ನೀಡಲು ಭಾರತ ಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ. ಸಂಕಷ್ಟದ ಸಮಯದಲ್ಲಿ ನೇಪಾಳ ಸರ್ಕಾರ ಮತ್ತು ಅಲ್ಲಿನ ಜನರ ಜೊತೆ ಭಾರತ ನಿಲ್ಲಲಿದೆ ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೋಶಿ, ಮಧೇಸ್, ಬಾಗಮತಿ, ಗಂಡಕಿ ಮತ್ತು ಲುಂಬಿನಿ ಪ್ರಾಂತ್ಯಗಳಲ್ಲಿ ಮುಂಗಾರು ಚುರು ಕಾಗಿದೆ. ಬಾಗಮತಿ ಮತ್ತು ಪೂರ್ವ ರಾಪ್ಟಿ ನದಿಭಾಗದ ಪ್ರದೇಶಗಳಿಗೆ ರೆಡ್ ಅಲರ್ಟ್ ಘೋಷಣೆಯಾಗಿದೆ.

ಮುಂದಿನ ಮೂರು ದಿನ ಭಾರಿ ಮಳೆ ಮತ್ತು ಭೂಕುಸಿತ ಸಾಧ್ಯತೆಯಿರುವ ಕಾರಣ ನೇಪಾಳ ರಾಜಧಾನಿ ಕಠ್ಮಂಡುವಿಗೆ ವಾಹನ ಪ್ರವೇಶ ಮತ್ತು ನಿರ್ಗಮನವನ್ನು ಶನಿವಾರದಿಂದ ಸೋಮವಾರದವರೆಗೆ ನಿರ್ಬಂಧಿಸಲಾಗಿದೆ. ನೇಪಾಳದೊಳಗಿನ ಪ್ರಾದೇಶಿಕ ವಿಮಾನ ಸಂಚಾರದಲ್ಲಿಯೂ ವ್ಯತ್ಯಯವಾಗಿದೆ.

ರೌತಹಟ್ ಜಿಲ್ಲೆಯಲ್ಲಿ ಮೂವರು ಮತ್ತು ಖೋಟಂಗ್ ಜಿಲ್ಲೆಯಲ್ಲಿ ಇಬ್ಬರು ಸಿಡಿಲು ಬಡಿದು ಮೃತಪಟ್ಟಿದ್ದಾರೆ. ನೇಪಾಳದ ವಿವಿಧೆಡೆ 9 ಮಂದಿ ಸಿಡಿಲು ಬಡಿದು ಗಾಯಗೊಂಡಿದ್ದಾರೆ. ಪಂಚತಾರ ಜಿಲ್ಲೆಯಲ್ಲಿ ಮಳೆಯಿಂದಾಗಿ ರಸ್ತೆ ಅಪಘಾತ ಸಂಭವಿಸಿ 6 ಮಂದಿ ಮೃತಪಟ್ಟಿದ್ದಾರೆ.

### ಭೂತಾನ್: ರಕ್ಷಣಾಕಾರ್ಯಕ್ಕೆ ಭಾರತ ನೆರವು

ಭೂತಾನ್‌ನಲ್ಲಿ ಸಂಭವಿಸಿದ್ದ ಪ್ರವಾಹದಿಂದ ಸಂತ್ರಸ್ತರಾಗಿದ್ದವರ ರಕ್ಷಣೆಗೆ ಭಾರತೀಯ ಸೇನೆಯು ಕೈಜೋಡಿಸಿದೆ. ಅಮೋಚು ನದಿಯಿಂದಾಗಿ ಉಂಟಾದ ಪ್ರವಾಹದಿಂದಾಗಿ ಹಲವು ಕುಟುಂಬಗಳು ಸಂಕಷ್ಟಕ್ಕೀಡಾಗಿದ್ದವು. ಪ್ರತಿಕೂಲ ಹವಾಮಾನದಿಂದಾಗಿ ಭೂತಾನ್ ಹೆಲಿ ಕಾಪ್ಟರ್‌ಗಳು ರಕ್ಷಣಾ ಕಾರ್ಯ ನಡೆಸಲು ವಿಫಲವಾಗಿದ್ದವು. ಭೂತಾನ್ ಸರ್ಕಾರದ ಕೋರಿಕೆಗೆ ಸ್ಪಂದಿಸಿದ ಭಾರತ ಹೆಲಿಕಾಪ್ಟರ್‌ಗಳನ್ನು ಕಳುಹಿಸಿದೆ.

## ಬಿಡಬ್ಲ್ಯುಎಫ್ ಸೂಪರ್ ಬ್ಯಾಡ್ಮಿಂಟನ್ : ಶ್ರೀಯಾಂಶಿಗೆ ಚೊಚ್ಚಲ ಪ್ರಶಸ್ತಿ



• ಪ್ರಜೋದಯ ವರದಿ

**ಅಲ್ ಐಯಿನ್ ಯುಎಇ:** ಭಾರತದ ಯುವ ಪ್ರತಿಭಾನ್ವಿತ ಆಟಗಾರ್ತಿ ಶ್ರೀಯಾಂಶಿ ವಾಲಿಶೆಟ್ಟಿ ಅವರು ಬಿಡಬ್ಲ್ಯುಎಫ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ ತೆಲಂಗಾಣದ 18 ವರ್ಷದ ಶ್ರೀಯಾಂಶಿ 15–21, 22–20, 21–7ರಿಂದ ಭಾರತದವರೇ ಆದ ತಸ್ನೀಮ್ ಮೀರ್ ವಿರುದ್ಧ ಜಯಿಸಿದರು. ಪಂದ್ಯವು 49 ನಿಮಿಷ ನಡೆಯಿತು.

ಮೊದಲ ಗೇಮ್‌ನಲ್ಲಿ ಶ್ರೀಯಾಂಶಿ ಸೋತರು. ಈ ಗೇಮ್ ಆರಂಭದಲ್ಲಿ ಶ್ರೀಯಾಂಶಿ 8–4ರ ಮುನ್ನಡೆ ಹೊಂದಿದ್ದರು. ಅದರ ನಂತರ ಚೇತರಿಸಿಕೊಂಡ ತಸ್ನೀಂ ಅವರು 14–9ರ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾದರು. ಅಲ್ಲಿಂದ ಮುಂದೆಯೂ ಬಿಗಿಹಿಡಿತ ಸಾಧಿಸಿದ ಗುಜರಾತ್ ಹುಡುಗಿ ತಸ್ನೀಂ ದೊಡ್ಡ ಅಂತರದ ಜಯ ಸಾಧಿಸಿದರು.

ಎರಡನೇ ಗೇಮ್‌ನಲ್ಲಿಯೂ ಕಠಿಣ ಪೈಪೋಟಿ ಎದುರಿಸಿದ ಅವರು ಟೈಬ್ರೇಕರ್‌ನಲ್ಲಿ ಮೇಲುಗೈ ಸಾಧಿಸಿದರು. ನಂತರ ಕೊನೆಯ ಮತ್ತು ನಿರ್ಣಾಯಕ ಗೇಮ್‌ನಲ್ಲಿ ಪಾರಮ್ಯ ಮೆರೆದ ಶ್ರೀಯಾಂಶಿ ತಮ್ಮ ಎದುರಾಳಿಯನ್ನು ಸೋಲಿಸಿದರು. ಶ್ರೀಯಾಂಶಿ ಅವರು ಪುಲ್ಲೇಲ ಗೋಪಿಚಂದ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

## ವಿದರ್ಭ ಮಡಿಲಿಗೆ ಇರಾನಿ ಟ್ರೋಫಿ

• ಪ್ರಜೋದಯ ವರದಿ



**ನಾಗ್ಪುರ:** ಯಶ್ ಧುಳ್ ಸೊಗಸಾದ 92 ರನ್ (117ಎ) ಬಾರಿಸಿದರೂ, ವಿದರ್ಭದ ಸಂಘಟಿತ ಬೌಲಿಂಗ್ ದಾಳಿಯೆದುರು ರೆಸ್ಟ್ ಆಫ್ ಇಂಡಿಯಾ ತಂಡ ಹೆಚ್ಚೇನೂ ಮಾಡ ಲಾಗಲಿಲ್ಲ. ಐದನೇ ಹಾಗೂ ಅಂತಿಮ ದಿನವಾದ ಭಾನುವಾರ 93 ರನ್‌ಗಳಿಂದ ರೆಸ್ಟ್ ಆಫ್ ಇಂಡಿಯಾ ತಂಡ ವನ್ನು ಸೋಲಿಸಿದ ವಿದರ್ಭ ತಂಡ ಇರಾನಿ ಟ್ರೋಫಿಯನ್ನೂ ಗೆದ್ದುಕೊಂಡಿತು.

ಡಗೈ ಸ್ಪಿನ್ನರ್ ಹರ್ಷ ದುಬೆ 73 ರನ್ನಿಗೆ 4 ವಿಕೆಟ್ ಪಡೆದರೆ, ವೇಗಿ ಯಶ್ ಠಾಕೂರ್ (47ಕ್ಕೆ2) ಅವರು ರೆಸ್ಟ್ ಆಫ್ ಇಂಡಿಯಾಕ್ಕೆ ಹೆಚ್ಚಿನ ಹಾನಿ ಎಸಗಿದರು. ಇಬ್ಬರೂ ಈ ಪಂದ್ಯದಲ್ಲಿ ತಲಾ ಆರು ವಿಕೆಟ್ ಪಡೆದರು. ಇದರೊಂದಿಗೆ ಇರಾನಿ ಟ್ರೋಫಿಯಲ್ಲಿ ಆಡಿದ ಮೂರೂ ಸಂದರ್ಭಗಳಲ್ಲಿ ವಿದರ್ಭ ಚಾಂಪಿ ಯನ್ ಆದ ಶ್ರೇಯಸ್ಸಿಗೆ ಪಾತ್ರವಾಯಿತು.

ಗೆಲ್ಲಲು 361 ರನ್ ಗಳಿಸುವ ಗುರಿಯೊಡನೆ ಶನಿವಾರ 2 ವಿಕೆಟ್‌ಗೆ 30 ರನ್ ಗಳಿಸಿದ್ದ ರೆಸ್ಟ್ ಆಫ್ ಇಂಡಿಯಾ 267 ರನ್‌ಗಳಿಗೆ ಆಲೌಟ್ ಆಯಿತು. ಲಂಚ್‌ಗೆ ಮೊದಲ ಒಂದು ಹಂತದಲ್ಲಿ 133 ರನ್‌ಗಳಾಗುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡಿತ್ತು. ಆದರೆ ಧುಳ್ ಮತ್ತು ಮಾನವ್ ಸುತಾರ್ (ಔಟಾಗದೇ 56 ರನ್, 113ಎಸೆತ) ಅವರು ಏಳನೇ ವಿಕೆಟ್‌ಗೆ 104 ರನ್ ಜೊತೆಯಾಟದಲ್ಲಿ ತೊಡಗಿದ್ದರಿಂದ ಪಂದ್ಯ ಜೀವ ಪಡೆಯಿತು. ಈ ಹಂತದಲ್ಲಿ ಧುಳ್ ಅವರ ವಿಕೆಟ್ ವಿಕೆಟ್ ಪಡೆದ ಯಶ್ ಠಾಕೂರ್ ವಿದರ್ಭ ಗೆಲುವನ್ನು ಖಚಿತಪಡಿಸಿದರು.

**ಮಾತಿನ ಚಕಮಕಿ**

ಠಾಕೂರ್ ಬೌಲಿಂಗ್‌ನಲ್ಲಿ ಚೆಂಡನ್ನು ಥರ್ಡ್‌ಮ್ಯಾನ್ ಮೇಲಿಂದ ಹೊಡೆಯಲು ಯತ್ನಿಸಿದ ಧುಳ್ ಬೌಂಡರಿ ಗೆರೆಯ ಸನಿಹ ಅಥರ್ವ ತೈಡೆ ಅಂದಾಜಿಸಿ ಹಿಡಿದ ಉತ್ತಮ ಕ್ಯಾಚಿಗೆ ನಿರ್ಗಮಿಸಬೇಕಾಯಿತು. ಆಗ ಯಶ್ ಠಾಕೂರ್ ಪ್ರಚೋದನೆಯ ರೀತಿ ಸೆಂಡ್ ಆಫ್ ಸಂಕೇತ ಪ್ರದರ್ಶಿಸಿದ್ದರಿಂದ ಧುಳ್ ಸಿಟ್ಟಾದರು. ಯಶ್ ದ್ವಯರ ಮಧ್ಯೆ (ಧುಳ್ ಮತ್ತು ಠಾಕೂರ್) ವಾಗ್ವದ ನಡೆಯಿತು. ಅಂಪೈರ್‌ಗಳು ಬಂದು ಪರಿಸ್ಥಿತಿ ತಿಳಿಗೊಳಿಸಿದರು.

**ಸಂಕ್ಷಿಪ್ತ ಸ್ಕೋರು**

ವಿದರ್ಭ: 342 ಮತ್ತು 232, ರೆಸ್ಟ್ ಆಫ್ ಇಂಡಿಯಾ: 214 ಮತ್ತು 73.5 ಓವರುಗಳಲ್ಲಿ 267 (ಇಶಾನ್ ಕಿಶನ್ 35, ಯಶ್ ಧುಳ್ 92, ಸಾರಾಂಶ್ ಜೈನ 29, ಮಾನವ್ ಸುತಾರ್ ಔಟಾಗದೇ 56; ಹರ್ಷ ದುಬೆ 73ಕ್ಕೆ4, ಆದಿತ್ಯ ಠಾಕರೆ 27ಕ್ಕೆ2, ಯಶ್ ಠಾಕೂರ್ 47ಕ್ಕೆ2).

## ಗಣಪತಿ ಮಹೋತ್ಸವದಲ್ಲಿ ಲೋಕಕಲ್ಯಾಣಾರ್ಥ ಹೋಮ

• ಪ್ರಜೋದಯ ವರದಿ

**ಅರಸೀಕೆರೆ:** ನಗರದ ಪ್ರಸನ್ನ ಗಣಪತಿ ಮಹೋತ್ಸವದಲ್ಲಿ ಲೋಕಕಲ್ಯಾಣಾರ್ಥವಾಗಿ ಭಾನುವಾರ ಸಹಸ್ರ ಮೋದಕ ಗಣಪತಿ ಹೋಮ ನೇರವೇರಿಸಲಾಯಿತು.

ವೇದಬ್ರಹ್ಮ ಆದಿತ್ಯ ಕಣಕಟ್ಟೆ ಹಾಗು ಚಂದ್ರಶೇಖರ್ ಅವರ ನೇತೃತ್ವದಲ್ಲಿ ರೈತರ ಮತ್ತು ಮಹಾಜನರ ಸೇವಾರ್ಥವಾಗಿ ನವಗ್ರಹ, ಮೃತ್ಯುಂಜಯ ಹಾಗು ಸಹಸ್ರ ಮೋದಕ ಹೋಮ ಸೇರಿ ವಿವಿಧ ಪೂಜಾ ಕೈಂಕರ್ಯಗಳು ನಡೆದವು.



ಹೋಮದ ಪೂರ್ಣಾಹುತಿ ಸಂದರ್ಭದಲ್ಲಿ ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಮಂಗಳದ್ರವ್ಯಗಳನ್ನು ಅಗ್ನಿಗೆ ಅರ್ಪಿಸಿ ಹೋಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಸನಾತನ ಧರ್ಮದಲ್ಲಿ ಹೋಮಗಳಿಗೆ ವಿಶಿಷ್ಟ ಆದ್ಯತೆ ನೀಡಲಾಗಿದೆ. ಹೋಮಗಳ ಮೂಲಕ ಲೋಕಕಲ್ಯಾಣಕ್ಕಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಕಳೆದ 84 ವರ್ಷಗಳಿಂದ ಶ್ರೀ ಪ್ರಸನ್ನ ಗಣಪತಿ ಆಸ್ಥಾನ ಮಂಟಪದಲ್ಲಿ ಧಾರ್ಮಿಕ ಪೂಜಾ ಕೈಂಕರ್ಯಗಳು ನಿರಂತರವಾಗಿ ನಡೆಯುತ್ತಿವೆ. ರೈತರ ಕಷ್ಟಗಳು ನೀಗಿ, ಜನಸಾಮಾನ್ಯರ ದುಃಖ ನಿವಾರಣೆಯಾಗಲಿ. ಎಲ್ಲೆಡೆ ಉತ್ತಮ ಮಳೆ, ಬೆಳೆ, ಶಾಂತಿ ಮತ್ತು ನೆಮ್ಮದಿ ನೆಲೆಸಲಿ ಎಂದು ಹಾರೈಸಿದರು.

ಭಕ್ತ ಮಂಡಳಿ ಅಧ್ಯಕ್ಷ ಸತ್ಯಕಾಂತ ರವೀಂದ್ರನಾಥ್ ಮಾತನಾಡಿ, ಪ್ರಸನ್ನ ಗಣಪತಿಗೆ ರಾಜ್ಯದ ಉದ್ದಗಲಕ್ಕೂ ಭಕ್ತರಿದ್ದಾರೆ. ಪ್ರತಿವರ್ಷವೂ ಅವರು ಇಲ್ಲಿಗೆ ಬಂದು ವಿಶೇಷ ಪ್ರಾರ್ಥನೆ ಸಲ್ಲಿಸುವ ಸಂಪ್ರದಾಯ ರೂಢಿಯಾಗಿದೆ. ಇಂತಹ ಲೋಕಕಲ್ಯಾಣಾರ್ಥ ಧಾರ್ಮಿಕ ಕಾರ್ಯ ಕ್ರಮಗಳಲ್ಲಿ ಭಾಗಿಯಾಗುವ ಭಕ್ತರು ಪುಣ್ಯವನ್ನು ಸಂಪಾದಿಸುತ್ತಿದ್ದಾರೆ. ಪ್ರತಿ ದಿನ ಸಂಜೆ ಆಸ್ಥಾನ ಮಂಟಪದ ವೇದಿಕೆಯಲ್ಲಿ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತಿವೆ. ಸ್ಥಳೀಯರು ಸೇರಿದಂತೆ ಹೊರಗಿನಿಂದ ಬಂದ ಕಲಾವಿದರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ತಿಳಿಸಿದರು.

ಉತ್ಸವ ಸಮಿತಿ ಸಂಚಾಲಕ ಟಿ. ಆರ್.ನಾಗರಾಜು ಮಾತನಾಡಿ, 84ನೇ ವರ್ಷದ ವಿಸರ್ಜನಾ ಮಹೋತ್ಸವ ಅ.31ರಿಂದ ಆರಂಭವಾಗಿ ನವೆಂಬರ್ 1ರಂದು ಸಂಜೆ 8 ಗಂಟೆಗೆ ಕಂತೇನಹಳ್ಳಿ ಕೆರೆಯಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ವಿಶೇಷ ಕಲಾ ತಂಡಗಳು ಭಾಗವಹಿಸಲಿದ್ದು, ಮದ್ದು ಗುಂಡುಗಳ ಪ್ರದರ್ಶನವೂ ಇರಲಿದೆ ಎಂದು ಹೇಳಿದರು.

ಪದಾಧಿಕಾರಿಗಳಾದ ನಾಗ ಭೂಷಣ, ವೆಂಕಟೇಶ್ ಬಾಬು, ಸ್ವಾಮಿ, ಬಾಲಾಜಿ, ಬಸವರಾಜು, ಮಲ್ಲಿಕಾರ್ಜುನ, ಜೇನುಕಲ್ಲು ಜಯಣ್ಣ, ಕುಮಾರಸ್ವಾಮಿ, ಪ್ರಭು ದೇವ, ವಿಪ್ರಮಂಜು, ವಿಭವ್ ಇಟಗಿ, ಪುರೋಹಿತರಾದ ವೆಂಕಟೇಶ್, ಗಣೇಶ್, ಪ್ರಕಾಶ್, ಮೋಹನ್ ರಾಜ್ ಸೇರಿ ನೂರಾರು ಭಕ್ತರು ಭಾಗವಹಿಸಿದ್ದರು.

## ಸಮೀಕ್ಷೆ ವೇಳೆ ವೈಯಕ್ತಿಕ ಮಾಹಿತಿ ಕೇಳಬೇಡಿ

• ಪ್ರಜೋದಯ ವರದಿ



**ಬೆಂಗಳೂರು:** ನಾಗರಿಕರ ಬಳಿ ಕೋಳಿ, ಕುರಿ, ಒಡವೆ, ವಾಷಿಂಗ್ ಮಷೀನ್, ಫ್ರಿಜ್ ಹೀಗೆ ವೈಯಕ್ತಿಕ ಮಾಹಿತಿಗ ಳನ್ನು ಕೇಳಲು ಹೋಗಬೇಡಿ ಎಂದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಕ ರಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಅವರು ಸಲಹೆ ನಿಡಿದರು.

ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಮೀಕ್ಷಕರು ಏನು ಮಾಡುತ್ತಾರೊ ಗೊತ್ತಿಲ್ಲ ಎಂದರು. ಯಾರು ಏನೇ ಆಕ್ಷೇಪ ಮಾಡಿದರೂ ಸಮೀಕ್ಷೆ ನಡೆಯುತ್ತದೆ. ಇಷ್ಟವಿದ್ದ ಪ್ರಶ್ನೆಗೆ ಉತ್ತರಿಸಿ, ಇಲ್ಲದಿದ್ದರೆ ಬೇಡ ಎಂದು ನ್ಯಾಯಾಲಯವೇ ಹೇಳಿದೆ. ಸಮೀಕ್ಷೆಗೆ ವಿರೋಧ ಮಾಡುವುದು ಸರಿಯಲ್ಲ ಎಂದರು.

ಈ ಹಿಂದಿನ ಸಮೀಕ್ಷೆ ಸರಿಯಿಲ್ಲ ಎಂಬ ಕಾರಣಕ್ಕೆ ಹೊಸದಾಗಿ ಸಮೀಕ್ಷೆ ಮಾಡಲಾಗುತ್ತಿದೆ. ಎಲ್ಲರೂ ಸಹಕರಿಸಬೇಕು. ಎರಡು ಮೂರು ದಿನಗಳಲ್ಲಿ ಸಮೀಕ್ಷೆ ಮುಗಿಯಬಹುದೇ ಎಂಬ ಪ್ರಶ್ನೆಗೆ, ಈ ಬಗ್ಗೆ ಹಿಂದುಳಿದ ವರ್ಗಗಳ ಆಯೋಗದವರು ಯೋಚನೆ ಮಾಡುತ್ತಾರೆ ಎಂದೂ ಹೇಳಿದರು.

## ಡಾರ್ಜಲಿಂಗ್‌ನಲ್ಲಿ ಭೂಕುಸಿತ, ಪ್ರವಾಹ: 20 ಜನರು ಸಾವು

• ಪ್ರಜೋದಯ ವರದಿ

**ಡಾರ್ಜಲಿಂಗ್:** ಪಶ್ಚಿಮ ಬಂಗಾಳದ ಉತ್ತರ ಭಾಗದಲ್ಲಿರುವ ಡಾರ್ಜಲಿಂಗ್ ಹಾಗೂ ಮಿರಿಕ್ ಪ್ರದೇಶದಲ್ಲಿ ಶನಿವಾರ ರಾತ್ರಿ ಸುರಿದ ಭಾರಿ ಮಳೆ ಯಿಂದಾದ ಭೂಕುಸಿತ ಹಾಗೂ ಪ್ರವಾಹದಿಂದ ಮಕ್ಕಳು ಸೇರಿ ಕನಿಷ್ಠ 20 ಮಂದಿ ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ.

ಒಂದೇ ರಾತ್ರಿಯಲ್ಲಿ 300 ಮಿ. ಮೀ. ಮಳೆಯಾಗಿದ್ದು, ನದಿಗಳು ಉಕ್ಕಿ ಹರಿದಿವೆ. ಅದರಿಂದ ಹಲವೆಡೆ ವ್ಯಾಪಕ ಹಾನಿಯಾಗಿದೆ. ನೀರು ರಭಸವಾಗಿ ಹರಿಯುತ್ತಿದ್ದು, ಸೇತುವೆ ಹಾಗೂ ರಸ್ತೆಗಳಿಗೆ ಹಾನಿಯಾಗಿದೆ. ಅನೇಕ ಮನೆಗಳು ಕೊಚ್ಚಿ ಹೋಗಿವೆ. ಹಲವು ಹಳ್ಳಿಗಳಿಗೆ ಸಂಪರ್ಕ ಕಡಿತ ಗೊಂಡಿದೆ. ಡಾರ್ಜಲಿಂಗ್ ಜಿಲ್ಲೆಯಲ್ಲಿ ಎರಡು ಕಬ್ಬಿಣದ ಸೇತುವೆಗಳು ಮುರಿದಿವೆ.

ಜಲಪೈಗುಡಿ, ಅಲೀಪುರದೂರ್, ಸರ್ಸಾಲಿ, ಜಸ್ಬಿರ್‌ಗಾಂವ್, ಮಿರಿಕ್ ಬಸ್ತಿ, ಧಾರ್‌ಗಾಂವ್ (ಮೆಚಿ), ನಾಗರಾಕಾಟಾ, ಮಿರಿಕ್ ಸರೋವರ ಪ್ರದೇಶದಲ್ಲಿ ಸಾವು–ನೋವು ಸಂಭವಿಸಿವೆ. ಮಿರಿಕ್ ಪ್ರದೇಶದಲ್ಲಿ ಭೂಕುಸಿತ ಉಂಟಾಗಿ ಕನಿಷ್ಠ 11 ಮಂದಿ ಅಸು ನೀಗಿದ್ದಾರೆ. ಏಳು ಮಂದಿ ಗಾಯಾಳುಗಳನ್ನು ರಕ್ಷಿಸಲಾಗಿದೆ.



ಡಾರ್ಜಲಿಂಗ್‌ನಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ಧಾರ್‌ಗಾಂವ್, ನಾಗರಾಕಾಟಾ ಪ್ರದೇಶದಲ್ಲಿ ಅವ ಶೇಷಗಳಡಿ ಸಿಲುಕಿದ್ದ 40 ಜನರನ್ನು ರಕ್ಷಿಸಲಾಗಿದೆ. ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿದು ಅನೇಕ ಮನೆಗಳು ನೆಲಸಮವಾಗಿವೆ. ಪೊಲೀಸರು, ಸ್ಥಳೀಯ ಆಡಳಿತ ಹಾಗೂ ವಿಪತ್ತು ಸ್ಪಂದನಾ ಪಡೆಯ ಸಿಬ್ಬಂದಿ ರಕ್ಷಣಾ ಕಾರ್ಯ ಕೈಗೊಂಡಿದ್ದಾರೆಂದು ಎನ್‌ಡಿಆರ್‌ಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ಈ ಘಟನೆಯಲ್ಲಿ ಮೃತಪಟ್ಟವರ ಕುಟುಂಬಸ್ಥರಿಗೆ ಪರಿಹಾರ ಹಾಗೂ ಒಬ್ಬ ಸದಸ್ಯರಿಗೆ ಉದ್ಯೋಗ ನೀಡು ವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಘೋಷಿಸಿದ್ದಾರೆ. ಆದರೆ, ಎಷ್ಟು ಮೊತ್ತ ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಡಾರ್ಜಲಿಂಗ್, ಕಾಲಿಂಪಾಂಗ್ ಸೇರಿ ವಿವಿಧೆಡೆ ಸೋಮವಾರದವರೆಗೆ ಭಾರಿ ಮಳೆಯಾ ಗಲಿದ್ದು, ಮತ್ತಷ್ಟು ಭೂ ಕುಸಿತ ಸಂಭವಿಸುವ ಅಪಾಯ ಇದೆ ಎಂದು ಭಾರತೀಯ ಹವಾ ಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ರೆಡ್ ಅಲರ್ಟ್ ಘೋಷಿಸಿದೆ.

ಈ ಭಾಗದಲ್ಲಿ ಮಳೆಗಾಲದಲ್ಲಿ ಭೂಕುಸಿತ, ಪ್ರವಾಹ ಸಂಭವಿಸು ವುದು ಸಹಜ. ಆದರೆ, ಹವಾಮಾನ ಬದಲಾವಣೆ, ಯೋಜಿತವಲ್ಲದ ಅಭಿವೃದ್ಧಿ ಸೇರಿ ವಿವಿಧ ಕಾರಣ ಗಳಿಂದಾಗಿ ಪ್ರಾಕೃತಿಕ ವಿಕೋಪಗಳು ಹೆಚ್ಚಾಗುತ್ತಿವೆ.

### ಪ್ರವಾಸಿಗರ ಸುರಕ್ಷತೆಗೆ ಕ್ರಮ


ಭೂತಾನ್‌ನಲ್ಲಿ ಬೀಳುತ್ತಿರುವ ನಿರಂತರ ಮಳೆಯಿಂದಾಗಿ ಪಶ್ಚಿಮ ಬಂಗಾಳದಲ್ಲಿ ಪ್ರವಾಹ ಉಂಟಾಗಿದೆ. ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದು ಅನೇಕ ಮನೆ ರಸ್ತೆಗಳಿಗೆ ಹಾನಿಯಾ ಗಿದೆ. ಪ್ರವಾಹಪೀಡಿತ ಐದು ಜಿಲ್ಲೆಗಳ ಅಧಿಕಾರಿಗಳೊಂದಿಗೆ ಸಭೆಗಳನ್ನು ಮಾಡಿದ್ದೇವೆ. ಪ್ರವಾಹ ಪೀಡಿತ ಪ್ರದೇಶಕ್ಕೆ ಅ.6ರಂದು ಭೇಟಿ ನೀಡಿ ಪರಿಶೀಲಿಸುತ್ತೇನೆಂದು ಮಮತಾ ಬ್ಯಾನರ್ಜಿ ತಿಳಿಸಿದ್ದಾರೆ.

ಭೂಕುಸಿತ ಹಾಗೂ ರಸ್ತೆ ಸಂಪರ್ಕ ಕಡಿತದಿಂದಾಗಿ ಈ ಭಾಗದಲ್ಲಿ ಸಾವಿರಾರು ಪ್ರವಾಸಿಗರು ಸಿಲುಕಿಕೊಂಡಿದ್ದಾರೆ. ಅವರನ್ನು ಸುರಕ್ಷಿತವಾಗಿ ಕರೆತರಲು ವ್ಯವಸ್ಥೆ ಮಾಡಲಾಗುವುದು. ಪ್ರವಾಸಿಗರು ಭಯಪಡಬಾರದೆಂದು ಬ್ಯಾನರ್ಜಿ ಮನವಿ ಮಾಡಿದ್ದಾರೆ.

### ಪ್ರತಿಭಟನಾ ರ‍್ಯಾಲಿ

ಭೂಕುಸಿತ ಹಾಗೂ ಪ್ರವಾಹದಿಂದ ಅನೇಕರು ಮೃತಪಟ್ಟಿದ್ದರೂ ರಾಜ್ಯ ಸರ್ಕಾರವು ದುರ್ಗಾ ಪೂಜಾ ಕಾರ್ಯಕ್ರಮ ನಡೆಸಲು ಮುಂದಾಗಿದೆ ಎಂದು ಆರೋಪಿಸಿ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಭಾನುವಾರ ಪ್ರತಿಭಟನಾ ರ‍್ಯಾಲಿ ನಡೆಸಿದರು.

## ಭಾರತಕ್ಕೆ ಎಚ್ಚರಿಕೆ ನೀಡಿದ ಪಾಕ್ ರಕ್ಷಣಾ ಸಚಿವ



• ಪ್ರಜೋದಯ ವರದಿ

**ಇಸ್ಲಾಮಾಬಾದ್:** ಪಾಕಿಸ್ತಾನದ ವಿರುದ್ಧ ಮತ್ತೆ ಸೇನಾ ಸಂಘರ್ಷಕ್ಕೆ ಭಾರತ ಮುಂದಾದರೆ ಅದಕ್ಕೆ ತಕ್ಕ ತಿರುಗೇಟು ನೀಡಲಾಗುವುದೆಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸೀಫ್ ಭಾನುವಾರ ಹೇಳಿದ್ದಾರೆ.

ಭಾರತದ ರಕ್ಷಣಾ ಸಚಿವ ರಾಜನಾಥ ಸಿಂಗ್ ಹಾಗೂ ಸೇನಾ ಮುಖ್ಯಸ್ಥರಾದ ಜನರಲ್ ಉಪೇಂದ್ರ ದ್ವಿವೇದಿ ಅವರು ಇತ್ತೀಚೆಗಷ್ಟೇ ಮತ್ತೆ ದುಸ್ಸಾಹಸಗಳಿಗೆ ಕೈ ಹಾಕದಂತೆ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದರು. ವಾಯುಪಡೆ ಮುಖ್ಯಸ್ಥ ಮಾರ್ಷಲ್ ಎ.ಪಿ.ಸಿಂಗ್ ಅವರು ಕೂಡ ಸಿಂಧೂರ ಕಾರ್ಯಾಚರಣೆ ವೇಳೆ ಪಾಕಿಸ್ತಾನದ 11 ರಿಂದ 12 ಯುದ್ಧ ವಿಮಾನಗಳನ್ನು ಭಾರತ ಹೊಡೆದುರುಳಿಸಿತ್ತು ಎಂದು ಬಹಿರಂಗವಾಗಿ ಹೇಳಿಕೆ ನೀಡಿದ್ದರು.

ರಕ್ಷಣಾ ಸಚಿವರು ಹಾಗೂ ರಕ್ಷಣಾ ಪಡೆಗಳ ಮುಖ್ಯಸ್ಥರ ಈ ಹೇಳಿಕೆಗಳಿಗೆ ಸಾಮಾಜಿಕ ಜಾಲತಾಣಗಳಲ್ಲಿ ಪಾಕಿಸ್ತಾನದ ರಕ್ಷಣಾ ಸಚಿವ ಆಸೀಫ್ ಪತ್ರಿಕ್ರಿಯೆ ನೀಡಿದ್ದಾರೆ. 0–6 ಅಂಕಗಳಲ್ಲಿ ಹೀನಾಯ ಸೋಲನ್ನು ಕಂಡ ಬಳಿಕ ತಮ್ಮ ಮೇಲಿನ ವಿಶ್ವಾಸಾರ್ಹತೆಯನ್ನು ಮತ್ತೆ ಪಡೆದುಕೊಳ್ಳಲು ಭಾರತೀಯ ಸೇನಾ ನಾಯಕರು ಮತ್ತು ರಾಜಕೀಯ ನಾಯಕರು ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕಾಗಿಯೇ ಇಂಥಹ ಹೇಳಿಕೆ ನೀಡುತ್ತಿದ್ದಾರೆ. ಮತ್ತೆ ಇಂಥಹ ಪ್ರಯತ್ನ ಮಾಡಿದರೆ ಅಂಕ ಈ ಹಿಂದಿಗಿಂತಲೂ ಹೆಚ್ಚಾಗುತ್ತದೆ ಎಂದಿದ್ದಾರೆ.

0–6 ಎಂದು ಯಾವ ಆಧಾರದಲ್ಲಿ ಉಲ್ಲೇಖಿಸಲಾಗಿದೆ? ಅದರ ಅರ್ಥವೇನು ಎಂಬುದಕ್ಕೆ ಆಸೀಫ್ ಯಾವುದೇ ಸ್ಪಷ್ಟನೆ ನೀಡಿಲ್ಲ.

## ವಿಜಯ್ ಪ್ರಚಾರ ಬಸ್ ಚಾಲಕನ ವಿರುದ್ಧ ಎಫ್‌ಐಆರ್



• ಪ್ರಜೋದಯ ವರದಿ

**ಕರೂರು (ತಮಿಳುನಾಡು):** ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರು ಪ್ರಚಾರಕ್ಕೆ ಬಳಸುತ್ತಿದ್ದ ಬಸ್ ಚಾಲಕನ ವಿರುದ್ಧ ತಮಿಳುನಾಡು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸೆಪ್ಟೆಂಬರ್ 27ರಂದು ನಡೆದ ಕಾಲ್ತುಳಿತದ ದುರಂತಕ್ಕೂ ಮುನ್ನ ಕರೂರ್ ರ‍್ಯಾಲಿಗೆ ಬರುತ್ತಿದ್ದ ವೇಳೆ ಮಾರ್ಗಮಧ್ಯೆ ನಡೆಸಿದ ಅಪಘಾತಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಾರ ಸಂಖ್ಯೆಯ ಅಭಿಮಾನಿಗಳು ವಿಜಯ್ ಅವರನ್ನು ಹತ್ತಿರದಿಂದ ನೋಡಲು ತಮ್ಮ ದ್ವಿಚಕ್ರ ವಾಹನಗಳಲ್ಲಿ ಪ್ರಚಾರ ವಾಹನದ ಅಕ್ಕಪಕ್ಕ ಬರುತ್ತಿದ್ದರು. ಈ ವೇಳೆ ಪ್ರಚಾರ ವಾಹನ ಅಭಿಮಾನಿಗಳ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಈ ದೃಶ್ಯ ಹಲವು ಟಿವಿ ವಾಹಿನಿಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಅದರ ಆಧಾರದ ಮೇಲೆ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ. ಅಪಘಾತಕ್ಕೆ ಕಾರಣವಾಗಿದ್ದ ಚಾಲಕನ ವಿರುದ್ಧ ಏಕೆ ಇನ್ನೂ ಕ್ರಮ ಕೈಗೊಂಡಿಲ್ಲ ಎಂದು ಹೈಕೋರ್ಟ್ ಕೂಡಾ ಪೊಲೀಸರನ್ನು ಪ್ರಶ್ನಿಸಿತ್ತು.

## ನಿತೀಶ್ ಮಾನಸಿಕ ಆರೋಗ್ಯದ ಬಗ್ಗೆ ಅನುಮಾನ



• ಪ್ರಜೋದಯ ವರದಿ

**ಪಟ್ನಾ(ಬಿಹಾರ):** ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ವರ್ತನೆಯು ಅವರ ಮಾನಸಿಕ ಆರೋಗ್ಯ ಮತ್ತು ಸರ್ಕಾರ ನಡೆಸುವ ಸಾಮರ್ಥ್ಯದ ಬಗ್ಗೆ ಹೊಸ ಅನುಮಾನಗಳನ್ನು ಹುಟ್ಟುಹಾಕಿದೆ ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಭಾನುವಾರ ಹೇಳಿದ್ದಾರೆ.

ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದ ವಿಡಿಯೋವನ್ನು ತಮ್ಮ ಎಕ್ಸ್ ಖಾತೆಯಲ್ಲಿ ತೇಜಸ್ವಿ ಯಾದವ್ ಹಂಚಿಕೊಂಡಿ ದ್ದಾರೆ. ನಿತೀಶ್ ಕುಮಾರ್ ಅವರು ವರ್ಚುವಲ್ ಆಗಿ ಕಾರ್ಯಕ್ರಮಕ್ಕೆ ಹಾಜರಾಗಿದ್ದರು. ನಿತೀಶ್ ಅವರ ಈ ಮಾನಸಿಕ ಸ್ಥಿತಿಗೆ ಅವರ ಆಪ್ತ ಸಹಾಯಕರು ಕಾರಣರಾಗಿರ ಬಹುದೇ? ಮೈತ್ರಿಕೂಟದ ಪಾಲು ದಾರ ಬಿಜೆಪಿಯ ಅಣತಿಯಂತೆ ಅವರ ಆಹಾರಕ್ಕೆ ಏನಾದರೂ ಬೆರೆಸಿರ ಬಹುದೇ ಎಂದು ಪೋಸ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.

ನಂತರ, ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ತೇಜಸ್ವಿ, ಸ್ವಲ್ಪ ಸಮಯದಿಂದ ನಿತೀಶ್ ಕುಮಾರ್ ಅವರು ಸರಿಯಾದ ಮನಸ್ಥಿತಿಯಲ್ಲಿಲ್ಲ ಎಂಬುದು ಅವರ ವರ್ತನೆಯಿಂದ ತಿಳಿಯುತ್ತದೆ. ನನ್ನ ತಾಯಿ ರಾಬ್ರಿ ದೇವಿ ಬಗ್ಗೆ ಅಸಭ್ಯ ಹೇಳಿಕೆಗಳನ್ನು ನೀಡಿದ್ದಾರೆ. ಒಂದು ಬಾರಿಯಂತೂ ರಾಷ್ಟ್ರಗೀತೆ ವೇಳೆ ಅವರು ಬಾಲಿಶವಾಗಿ ನಡೆದುಕೊಂಡಿರುವುದು ಕ್ಯಾಮರಾದಲ್ಲಿ ಸೆರೆಯಾಗಿತ್ತು ಎಂದು ಹೇಳಿದ್ದಾರೆ.

ನಿನ್ನೆ ಅವರ ಅಶಿಸ್ತಿನ ವರ್ತನೆಯ ಮತ್ತೊಂದು ಉದಾಹರಣೆಯನ್ನು ನಾವು ನೋಡಿದ್ದೇವೆಂದು ವಿಡಿಯೋ ಬಗ್ಗೆ ಮಾತನಾಡಿದ್ದಾರೆ. ವಿಡಿಯೋದಲ್ಲಿ ಹಿರಿಯ ಬಿಜೆಪಿ ನಾಯಕ, ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಮಾತನಾಡುತ್ತಿರುವ ವೇಳೆ ನಿತೀಶ್ ಕುಮಾರ್ ಅವರು ತಮ್ಮ ಕಂಪ್ಯೂಟರ್ ಪರದೆಯತ್ತ ಕೈಜೋಡಿಸಿ ಪದೇ ಪದೇ ನಮಸ್ಕಾರ ಮಾಡುತ್ತಿರುವುದು ಸೆರೆಯಾಗಿದೆ.

**ಸಂಘರ್ಷ ಅಂತ್ಯಕ್ಕೆ ಟ್ರಂಪ್ ಯೋಜನೆ ರೂಪಿಸಿದ್ದರೂ ನಿಲ್ಲದ ಆಕ್ರಮಣ**

# ಗಾಜಾ ಮೇಲೆ ದಾಳಿ: ನಾಲ್ವರು ಮೃತ

• ಪ್ರಜೋದಯ ವರದಿ

**ಕೈರೊ/ಜೆರುಸಲೇಮ್:** ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರೂಪಿಸಿರುವ ಯೋಜನೆಯಿಂದ ಯುದ್ಧ ಕೊನೆಯಾಗಿ ಶಾಂತಿ ನೆಲಸಲಿದೆ ಎಂದು ಪ್ಯಾಲೆಸ್ಟೀನಿಯನ್ನರು ವಿಶ್ವಾಸ ವ್ಯಕ್ತಪಡಿಸುತ್ತಿರುವ ನಡುವೆಯೇ, ಇಸ್ರೇಲ್ ಪಡೆಗಳು ಗಾಜಾ ಪಟ್ಟಿ ಮೇಲೆ ದಾಳಿ ನಡೆಸಿವೆ.

ಶನಿವಾರ ತಡರಾತ್ರಿ ಹಾಗೂ ಭಾನುವಾರ ಹಲವು ವಸತಿ ಕಟ್ಟಡಗಳನ್ನು ಗುರಿಯಾಗಿ ಇಸ್ರೇಲ್ ಪಡೆಗಳು ಯುದ್ಧವಿಮಾನ ಹಾಗೂ ಟ್ಯಾಂಕ್‌ಗಳನ್ನು ಬಳಸಿ ದಾಳಿ ನಡೆಸಿವೆಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಇಸ್ರೇಲ್ ದಾಳಿಯಲ್ಲಿ ಕನಿಷ್ಠ ನಾಲ್ವರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ಹೇಳಿದ್ದಾರೆ.

ಡ್ರೋನ್‌ಗಳ ಮೂಲಕ ಗ್ರೆನೇಡ್‌ಗಳನ್ನು ಬೀಳಿಸಲಾಗಿದ್ದು, ಅನೇಕ ಮನೆಗಳ ಚಾವಣಿಗಳು ಹಾರಿಹೋಗಿವೆ. ಹತ್ತಕ್ಕೂ ಅಧಿಕ ಮನೆಗಳಿಗೆ ಹಾನಿಯಾಗಿದೆ ಎಂದು ಸಬ್ರಾ ಹಾಗೂ ಶೇಖ್ ರದ್ವಾನ್ ಪ್ರದೇಶಗಳ ನಿವಾಸಿಗಳು ಹೇಳಿದ್ದಾರೆ.

ಇನ್ನೊಂದೆಡೆ, ಗಾಜಾದಲ್ಲಿನ ಸಂಘರ್ಷಕ್ಕೆ ಅಂತ್ಯ ಹಾಡುವ ನಿಟ್ಟಿನಲ್ಲಿ ಎಲ್ಲ ಭಾಗೀದಾರರನ್ನು ಒಂದೆಡೆ ಸೇರಿಸಿ, ಮಾತುಕತೆಗೆ ವೇದಿಕೆ ಒದಗಿಸಲು ಈಜಿಪ್ಟ್ ಕೂಡ ಸಿದ್ಧತೆ ನಡೆಸುತ್ತಿದೆ. ಹಮಾಸ್, ಇಸ್ರೇಲ್, ಅಮೇರಿಕಾ ಹಾಗೂ ಕತಾರ್ ಪ್ರತಿನಿಧಿಗಳನ್ನು ಆಹ್ವಾನಿಸಿ, ಕದನ ವಿರಾಮ ಕುರಿತು ಚರ್ಚಿಸಲು ಪ್ರಯತ್ನಿಸುತ್ತಿದೆ. ಇಂತಹ ಪ್ರಯತ್ನಗಳ ನಡುವೆಯೇ ಈಗ ಇಸ್ರೇಲ್ ದಾಳಿಯನ್ನು ತೀವ್ರಗೊಳಿಸಿರುವುದು ಗಮನಾರ್ಹ.



**ಇಕ್ಕಟ್ಟಿನಲ್ಲಿ ನೆತನ್ಯಾಹು**

ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಅಂತ್ಯ ಹಾಡುವುದಕ್ಕಾಗಿ ಡೊನಾಲ್ಡ್ ಟ್ರಂಪ್ ರೂಪಿಸಿರುವ ಯೋಜನೆಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಒಪ್ಪಿಗೆ ಸೂಚಿಸಿದ್ದರೂ ಯುದ್ಧ ನಿಲ್ಲಿಸುವ ಕುರಿತಂತೆ ಪರ ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಇದು ನೆತನ್ಯಾಹು ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಹಮಾಸ್ ಒತ್ತೆಯಾಳಾಗಿ ಇರಿಸಿಕೊಂಡಿರುವವರ ಕುಟುಂಬಗಳು ಹಾಗೂ ಯುದ್ಧ ವಿರೋಧಿ ನಿಲುವು ಹೊಂದಿರುವ ಜನರು ಗಾಜಾ ಪಟ್ಟಿಯಲ್ಲಿನ ಯುದ್ಧ ನಿಲ್ಲಿಸುವಂತೆ ನೆತನ್ಯಾಹು ಅವರ ಮೇಲೆ ಒತ್ತಡ ಹೇರುತ್ತಿದ್ದಾರೆ. ಮತ್ತೊಂದೆಡೆ ಹಮಾಸ್‌ನ ಕಟ್ಟಾ ವಿರೋಧಿ ನಾಯಕರು ಯಾವುದೇ ಕಾರಣಕ್ಕೂ ಯುದ್ಧ ನಿಲ್ಲಿಸದಂತೆ ಒತ್ತಾ ಯಿಸುತ್ತಿದ್ದಾರೆ. ಗಾಜಾದಲ್ಲಿ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸುವುದು ದೊಡ್ಡ ಪ್ರಮಾ ದವಾಗಲಿದೆ ಎಂದು ಬಲಪಂಥೀಯ ನಾಯಕ ಹಾಗೂ ಹಣಕಾಸು ಸಚಿವ ಬೆಜಲೆಲ್ ಸ್ಮಾಟ್‌ರಿಚ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಒಂದು ವೇಳೆ ಹಮಾಸ್ ವಿರುದ್ಧದ ಯುದ್ಧವನ್ನು ನಿಲ್ಲಿಸಿದಲ್ಲಿ ನೆತನ್ಯಾಹು ನೇತೃತ್ವದ ಸರ್ಕಾರವನ್ನು ಉರುಳಿಸಲಾಗುವುದು ಎಂದು ಸ್ಮಾರ್‌ರಿಚ್ ಹಾಗೂ ಭದ್ರತಾ ಸಚಿವ ಇತಮಾರ್ ಬೆನ್‌ಗ್ವಿರ್ ಎಚ್ಚರಿಸಿದ್ದಾರೆ.

### ಬಂಧಿತರ ಹಸ್ತಾಂತರಕ್ಕೆ ಸಿದ್ಧ: ಹಮಾಸ್

ಇಸ್ರೇಲ್ ಜೊತೆಗಿನ ಯುದ್ಧವನ್ನು ಕೊನೆಗೊಳಿಸುವ ನಿಟ್ಟನಲ್ಲಿ ಒಪ್ಪಂದ ಮಾಡಿಕೊಂಡು ತತ್‌ಕ್ಷಣದಿಂದಲೇ ಕೈದಿಗಳ ಹಸ್ತಾಂತರಕ್ಕೂ ಸಿದ್ಧ ಎಂದು ಹಮಾಸ್ ತಿಳಿಸಿದೆ. ಯುದ್ಧ ಕೊನೆ ಗೊಳಿಸುವ ಉದ್ದೇಶದಿಂದ ಹಮಾಸ್ ಹಾಗೂ ಇಸ್ರೇಲ್‌ನ ಸಮಾಲೋಚನಕಾರರು ಈಜಿಪ್ಟ್ ನಲ್ಲಿ ಮಾತುಕತೆ ನಡೆಸಲು ತೆರಳಿರುವಂತೆಯೇ ಹಮಾಸ್ ಈ ಹೇಳಿಕೆ ನೀಡಿರುವುದು ಮಹತ್ವ ಪಡೆದಿದೆ.

ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಮಾಸ್ ಹಾಗೂ ಇಸ್ರೇಲ್ ನಡುವೆ ಶಾಂತಿ ಸ್ಥಾಪಿಸಲು ಶಾಂತಿ ಒಪ್ಪಂದವನ್ನು ಪ್ರಸ್ತಾಪಿಸಿದ್ದರು. ಅದನ್ನು ಹಮಾಸ್ ನಾಯಕರು ಒಪ್ಪಿದ ಬಳಿಕವೇ ಈಜಿಪ್ಟ್‌ನಲ್ಲಿ ಮಾತುಕತೆ ಏರ್ಪಡಿಸಲಾಗಿದೆ. ಹೀಗಾಗಿ ನಿಯಮಬದ್ಧವಾಗಿ ಇಸ್ರೇಲ್ ಜೊತೆಗೆ ಒಪ್ಪಂದ ಮಾಡಿಕೊಳ್ಳಲು ಸಿದ್ಧವಿರುವುದಾಗಿ ಹಮಾಸ್ ನಾಯಕರು ತಿಳಿಸಿದ್ದಾರೆ.

## ರಾಜ್ಯಪಾಲರ ವಿರುದ್ಧ ಸುಪ್ರೀಂ ಮೆಟ್ಟಿಲೇರಿದ ತಮಿಳುನಾಡು ಸರ್ಕಾರ



• ಪ್ರಜೋದಯ ವರದಿ

**ನವದೆಹಲಿ:** ಕಲೈನಾರ್ ವಿಶ್ವವಿದ್ಯಾಲಯ ಮಸೂದೆ 2025ಕ್ಕೆ ಅನುಮೋದನೆ ನೀಡದೆ ವಿಳಂಬ ಮಾಡುತ್ತಿರುವ ರಾಜ್ಯಪಾಲರ ವಿರುದ್ಧ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಮಸೂದೆ ಕುರಿತ ನಿರ್ಧಾರವನ್ನು ಪ್ರಕಟಿಸಲು ನಿರ್ದೇಶನ ನೀಡುವಂತೆ ನ್ಯಾಯಾಲಯಕ್ಕೆ ರಾಜ್ಯ ಸರ್ಕಾರ ಮನವಿ ಮಾಡಿದೆ. ಜೊತೆಗೆ, ಸಚಿವ ಸಂಪುಟದ ಸಲಹೆಯ ಅನುಸಾರ ಮತ್ತು ಸಂವಿಧಾನದ 200ನೇ ವಿಧಿಯ ಪ್ರಕಾರ ನಡೆದುಕೊಳ್ಳುವಂತೆ ರಾಜ್ಯಪಾಲರಿಗೆ ಸೂಚಿಸುವಂತೆಯೂ ತಿಳಿಸಿದೆ. ರಾಜ್ಯ ವಿಧಾನಸಭೆಯು ಅಂಗೀಕರಿ ಸಿರುವ ಮಸೂದೆಯನ್ನು ರಾಷ್ಟ್ರಪತಿ ಗಳ ಪರಿಶೀಲನೆಗಾಗಿ ರಾಜ್ಯಪಾಲ ಆರ್.ಎನ್.ರವಿ ಅವರು ಕಾಯ್ದಿರಿಸಿದ್ದಾರೆ.

